ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಕಹಾನಿ
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue: 207 ಸಂಚಿಕೆ: 207 | Date: 09-09-2026 Wednesday | RNI NO : KARKAN/2021/80805 | L2/RNP-1285/TMR/2025-27 | Page : 4 ಪುಟ : 4 | Price: 1.00 ಬೆಲೆ: 1.00 ರೂ

ಸರ್ಕಾರವೇ ನಿಡಗಲ್ಲು ಉತ್ಸವ ಆಚರಿಸಲಿ: ಶಾಂತಲಾ ರಾಜಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ, :– ಮಹರ್ಷಿ ವಾಲ್ಮೀಕಿ ಆಶ್ರಮ, ವಾಲ್ಮೀಕಿ ಜಾಗೃತಿ ವೇದಿಕೆ, ನಿಡಗಲ್ಲು ಗ್ರಾಮಸ್ಥರು ಮತ್ತು ದುರ್ಗದ ಅಭಿಮಾನಿಗಳ ವತಿಯಿಂದ 10ನೇ ವರ್ಷದ ನಿಡಗಲ್ಲು ಉತ್ಸವ–2026 ಅನ್ನು ನಿಡಗಲ್ಲು ದುರ್ಗದ ರಾಮತೀರ್ಥ ಬಳಿ ಅದ್ದೂರಿಯಾಗಿ ಆಚರಿಸಲಾಯಿತು.

ಡೋಲು ಬಾರಿಸುವ ಮೂಲಕ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿ.ಪಂ ಮಾಜಿ ಅಧ್ಯಕ್ಷೆ ಶಾಂತಲಾ ರಾಜಣ್ಣ, ಸರ್ಕಾರವೇ ಪ್ರತಿ ವರ್ಷ ನಿಡಗಲ್ಲು ಉತ್ಸವ ಆಚರಿಸಬೇಕು ಮತ್ತು ನಿಡಗಲ್ಲು ದುರ್ಗವನ್ನು ಪ್ರವಾಸೋದ್ಯಮ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಶಾಸಕ ಕೆ.ಎಂ. ತಿಮ್ಮರಾಯಪ್ಪ ಮಾತನಾಡಿ, ತಮ್ಮ ಶಾಸಕಾವಧಿಯಲ್ಲಿ ದುರ್ಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಿದ್ದು, ವಾಲ್ಮೀಕಿ ಆಶ್ರಮದ ಅಭಿವೃದ್ಧಿಗೆ ಸಂಸದರ ನಿಧಿಯಿಂದ ಸಹಕಾರ ಕೊಡಿಸುವುದಾಗಿ ಭರವಸೆ ನೀಡಿದರು.

ತುಮಕೂರು ನಗರಸಭೆ ಮಾಜಿ ಮಹಾಪೌರ, ವಾಲ್ಮೀಕಿ ಬ್ಯಾಂಕ್ ಅಧ್ಯಕ್ಷ ಬಿ.ಜಿ. ಕೃಷ್ಣಪ್ಪ ಮಾತನಾಡಿ, ಆಶ್ರಮದ ಭವನದ ಮುಂದುವರಿದ ಕಾಮಗಾರಿಗೆ ವೈಯಕ್ತಿಕವಾಗಿ ಮತ್ತು ಬ್ಯಾಂಕ್ ವತಿಯಿಂದ ಸಹಾಯ ಮಾಡುವುದಾಗಿ ತಿಳಿಸಿದರು.

ದಿವ್ಯ ಸಾನಿಧ್ಯ ವಹಿಸಿದ್ದ ವಾಲ್ಮೀಕಿ ಸಂಜಯ ಕುಮಾರಾನಂದ ಸ್ವಾಮೀಜಿ ಮಾತನಾಡಿ, 10 ವರ್ಷಗಳಿಂದ ಉತ್ಸವ ಆಚರಿಸುತ್ತಾ ಬಂದರೂ ಸ್ಥಳೀಯ ಜನ ಪ್ರತಿನಿಧಿಗಳು ಗಮನ ಹರಿಸದಿರುವುದಕ್ಕೆ ಬೇಸರ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿ ಸರ್ಕಾರದ ವತಿಯಿಂದ ಉತ್ಸವ ಆಚರಿಸಲು ಮತ್ತು ಆಶ್ರಮದ ಅಭಿವೃದ್ಧಿಗೆ ಶಾಸಕರು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಶಾಸಕರು ನಿಡಗಲ್ಲು ಗೈರು ಹಾಗಿರುವುದಕ್ಕೆ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು

ಕಾರ್ಯಕ್ರಮದಲ್ಲಿ ಶ್ರೀ ಲೋಕೇಶ್ ಪಾಳೇಗಾರ್ ಅಧ್ಯಕ್ಷರು ವಾಲ್ಮೀಕಿ ಜಾಗೃತಿ ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು ಕಾರ್ಯಕ್ರಮದಲ್ಲಿ ವಿಶೇಷ ಮೆರಗೂ ವಿವಿಧ ಸಂಸ್ಥಾನದ ಪಾಳೆಗಾರ ವಂಶಸ್ಥರಾದ ಚಿತ್ರದುರ್ಗದ ದೊಡ್ಡ ಮದಕರಿ ನಾಯಕ ವಂಶಸ್ಥರಾದ ರಾಜ ಪ್ರಸನ್ನ ನಾಯಕ. ರಾಜ ಯಲ್ಲಪ್ಪ ನಾಯಕ ಸಂಸ್ಥಾನದ ದೊರೆ ಪಾಳೆಗಾರ ರಾಜ ಜಯಚಂದ್ರ ರಾಜು. ನಾಯಕನಹಟ್ಟಿ ಸಂಸ್ಥಾನದ ಪಾಳೇಗಾರರಾದ ರಾಜಾ ರುದ್ರಮುನಿ ಪಾಳೇಗಾರ್. ಕಣ್ ಕುಪ್ಪೆ ಸಂಸ್ಥಾನದ ಪಾಳೆಗಾರರಾದ ರಾಜ ತಿಪ್ಪೇಶ್ ಪಾಳೆಗಾರ್. ಹೊಸದುರ್ಗ ಸಂಸ್ಥಾನದ ಪಾಳೆಗರ್ ರಾಜ ಶ್ರೀಧರ್ ನಾಯಕ ಉತ್ಸವದಲ್ಲಿ ಆಗಮಿಸಿರುವುದು ಕಾರ್ಯಕ್ರಮಕ್ಕೆ ವಿಶೇಷ ಮೆರಗುತ ನೀಡಿತ್ತು


ಉತ್ಸವ ಕಾರ್ಯಕ್ರಮ ನಿಡಗಲ್ಲು ಗ್ರಾಮದ ಶ್ರೀ ಮಹರ್ಷಿ ವಾಲ್ಮೀಕಿ ಆಶ್ರಮದಿಂದ ವಿವಿಧ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ರಾಮತೀರ್ಥದವರೆಗೂ ಕಲಾತಂಡಗಳ ಮೆರವಣಿಗೆ ನಡೆಯಿತು ವೇದಿಕೆಯಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವ

ಕನ್ನಡ ಸಂಸ್ಕೃತಿ ಇಲಾಖೆ ಅಡಿಯಲ್ಲಿ ಬಯಲಾಟ ಅಕಾಡೆಮಿ ಸದಸ್ಯರಾಗಿ ನೂತನವಾಗಿ ಆಯ್ಕೆಯಾದ ಡಿ ನಾಗರಾಜು ಅವರಿಗೆ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಜಾನಪದ ಜಾದು ಹಾಸ್ಯ ಕಲೆಗಾರ ಕಡಬ ಶ್ರೀನಿವಾಸ್ ರವರ ಕಲಾಪ್ರದರ್ಶನ ಜನ ಮೆಚ್ಚುಗೆ ಗಳಿಸಿತು

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಜಿ.ಪಂ. ಸದಸ್ಯ ತಿಮ್ಮಾರೆಡ್ಡಿ. ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಲಕ್ಷ್ಮೀನಾರಾಯಣ್. ವಾಲ್ಮೀಕಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಪುರುಷೋತ್ತಮ್ ನಾಯಕ. ಜಿಲ್ಲಾ ನಾಯಕ ಸಂಘದ ಪದಾಧಿಕಾರಿಗಳಾದ. ಜಯರಾಮ್. ಎನ್. ಅನಿಲ್ ಕುಮಾರ್. ಆರ್ ಟಿ ಓ ತಿಪ್ಪೇಸ್ವಾಮಿ. ಆರ್‌ಟಿಓ ನಾಗರಾಜ್. ಕೊತ್ತೂರು ನಾಗೇಶ್. ಸೊಗಡು, ಎನ್ ಎ, ಈರಣ್ಣ,

ಪಿಡಿಒ ಚಿಕ್ಕಣ್ಣ, ಡಿಎಸಸ್ ಸಿಕೆ ತಿಪ್ಪೇಸ್ವಾಮಿ, ರಾಜ್ಯ ಸಂಪನ್ಮೂಲ ವ್ಯಕ್ತಿ ನವೀನ್ ಕಿಲಾರ್ಲಹಳ್ಳಿ, ಮುಖಂಡರಾದ ಎನ್.ಎ. ಈರಣ್ಣ. ವೆಂಕಟೇಶ್. ಸಮಾಜ ಸೇವಕ ಚೇತನ್ ಬಾಬು. ನರಸಿಂಹ ಕೃಷ್ಣ. ನರಸಿಂಹಮೂರ್ತಿ. ಟಿ.ಪಿ. ನರಸಿಂಹ. ನಿಡಗಲ್ಲು. ರಾಮಪ್ಪ,ಕಾಮರಾಜ, ಮಹಾರಾಜ್, ಪಾಲಾಕ್ಷ, ಪಟೇಲ್ ಹನುಮಂತರಾಯ. ಹೋಮ ನಾಗರಾಜು, ಬಲರಾಮ್. ತಿಮ್ಮಯ್ಯ,ಮಲ್ಲಿಕಪ್ಪ, ಗಿರಿಜಾ ಶಿವಣ್ಣ, ನಿವೃತ್ತ ಸೈನಿಕ ಅನಂತ್. ಶ್ರೀಧರ್. ಪಾವಗಡ ಪ್ರಕಾಶ್. ರಂಗಮ್ಮ ಶಿವಕುಮಾರ. ಅಂಬಿಕರಮೇಶ್. ಮುಂತಾದವರು ಹಾಜರಿದ್ದರು



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆರೋಗ್ಯದಲ್ಲಿ ಕೊಂಚ ಏರುಪೇರು–ಚೇತರಿಕೆ



ಬೆಂಗಳೂರು: ನಿರಂತರ ಸಭೆ–ಸಮಾರಂಭಗಳು ಹಾಗೂ ಪ್ರವಾಸದ ನಡುವೆಯೇ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆರೋಗ್ಯದಲ್ಲಿ ಮಂಗಳವಾರ ಕೊಂಚ ಏರುಪೇರು ಕಾಣಿಸಿಕೊಂಡಿದ್ದು, ವಿಧಾನಸೌಧದಲ್ಲಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಮುಖ್ಯ ಮಂತ್ರಿ ಕಚೇರಿಯಲ್ಲಿ ಎಂದಿನಂತೆ ಕೆಲಸದಲ್ಲಿ ನಿರತರಾಗಿದ್ದ ವೇಳೆ ಡಿ.ಕೆ. ಶಿವಕುಮಾರ್ ಅವರಿಗೆ ಅಲ್ಪ ಸುಸ್ತು ಕಾಣಿಸಿಕೊಂಡಿದೆ. ಇದೇ ವೇಳೆ ರಕ್ತದೊತ್ತಡದಲ್ಲೂ ವ್ಯತ್ಯಾಸ ಕಂಡು ಬಂದ ಹಿನ್ನೆಲೆಯಲ್ಲಿ ಕೂಡಲೇ ವೈದ್ಯರಿಗೆ ಮಾಹಿತಿ ನೀಡಲಾಗಿದೆ. ಮಾಹಿತಿ ತಿಳಿದ ತಕ್ಷಣ ವೈದ್ಯರ ತಂಡ ವಿಧಾನಸೌಧದಲ್ಲಿರುವ ಮುಖ್ಯಮಂತ್ರಿ ಕಚೇರಿಗೆ ಆಗಮಿಸಿ ಆರೋಗ್ಯ ತಪಾಸಣೆ ನಡೆಸಿದೆ. ಪ್ರಾಥಮಿಕ ತಪಾಸಣೆಯಲ್ಲಿ ಬಿಪಿಯಲ್ಲಿ ಏರು ಪೇರು ಕಂಡು ಬಂದಿದ್ದು, ವೈದ್ಯರ ಸಲಹೆಯಂತೆ ಕೆಲ ಕಾಲ ವಿಶ್ರಾಂತಿ ಪಡೆದಿದ್ದಾರೆ.

ವಿಶ್ರಾಂತಿಯ ಬಳಿಕ ಡಿ.ಕೆ. ಶಿವಕುಮಾರ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು, ರಕ್ತದೊತ್ತಡವೂ ಸಹಜ ಸ್ಥಿತಿಗೆ ಮರಳಿದೆ ಎಂದು ತಿಳಿದು ಬಂದಿದೆ. ಇತ್ತೀಚಿನ ದಿನಗಳಲ್ಲಿ ಮುಖ್ಯಮಂತ್ರಿ ನಿರಂತರವಾಗಿ ವಿವಿಧ ಕಾರ್ಯಕ್ರಮಗಳು, ಸಭೆಗಳು ಹಾಗೂ ರಾಜ್ಯದ ವಿವಿಧ ಭಾಗಗಳ ಪ್ರವಾಸಗಳಲ್ಲಿ ತೊಡಗಿಸಿ ಕೊಂಡಿದ್ದರು. ಬಿಡುವಿಲ್ಲದ ಕೆಲಸದ ಒತ್ತಡ ಮತ್ತು ಓಡಾಟದಿಂದಾಗಿ ದೇಹ ಬಳಲಿರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಸದ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆರೋಗ್ಯ ಸ್ಥಿರವಾಗಿದ್ದು, ಆತಂಕಪಡುವ ಅಗತ್ಯವಿಲ್ಲ. ಹೆಚ್ಚಿನ ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಎಎಪಿ ಮುಖಂಡರ ಮೇಲಿನ ಆಕ್ರೋಶಕ್ಕೆ ಪಾವಗಡ ಶಾಸಕ ಸ್ಪಷ್ಟನೆ!

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪ್ರಜಾಸೇವಾ ಕಾರ್ಯಕ್ರಮದಲ್ಲಿ ಆಮ್ ಆದ್ಮಿ ಪಕ್ಷದ ಮುಖಂಡರನ್ನು ಗದರಿಸಿ ಕಳುಹಿಸಿದ ವಿಡಿಯೋ ವೈರಲ್ ಬೆನ್ನಲ್ಲೇ, ಪಾವಗಡ ಶಾಸಕ ಹೆಚ್.ವಿ. ವೆಂಕಟೇಶ್‌ಅವರು ಘಟನೆ ಕುರಿತು ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದ್ದಾರೆ.

"ನಾನು ಆ ಸಂದರ್ಭದಲ್ಲಿ ಅವರನ್ನು ಗದರಿಸಿ ಕಳುಹಿಸದೇ ಇದ್ದಿದ್ದರೆ, ಅಲ್ಲಿದ್ದ ಸುಮಾರು 40 ನೊಂದ ಕುಟುಂಬಗಳ ಸದಸ್ಯರೇ ಅವರ ಮೇಲೆ ದಾಳಿ ಮಾಡುತ್ತಿದ್ದರು" ಎಂದು ಶಾಸಕರು ಘಟನೆಯ ನೈಜತೆಯನ್ನು ಬಿಚ್ಚಿಟ್ಟಿದ್ದಾರೆ.

ಅರ್ಜಿ ನೀಡುವ ನೆಪದಲ್ಲಿ ಗಲಾಟೆಗೆ ಯತ್ನ?

ತುಮಕೂರು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ವೆಂಕಟೇಶ್, ಮುಖ್ಯಮಂತ್ರಿಗಳ ಆಶಯದಂತೆ ಹಮ್ಮಿಕೊಳ್ಳಲಾಗಿದ್ದ ಜನ ಸಂಪರ್ಕ ಸಭೆಯಲ್ಲಿ ತಹಸೀಲ್ದಾರ್ ಹಾಗೂ ಎಸಿ ಅವರೊಂದಿಗೆ ಸಾರ್ವಜನಿಕರ ಅರ್ಜಿಗಳನ್ನು ಸ್ವೀಕರಿಸಿ ಸಮಸ್ಯೆ ಬಗೆಹರಿಸಲಾಗುತ್ತಿತ್ತು. ಈ ವೇಳೆ ಏಕಾಏಕಿ ಬಂದ ಆಮ್ ಆದ್ಮಿ ಪಕ್ಷದ ಮುಖಂಡರಾದ ರಾಮಾಂಜಿನಪ್ಪ ಮತ್ತು ತಿಪ್ಪೇಸ್ವಾಮಿ, ಅರ್ಜಿ ಹಸ್ತಾಂತರಿಸಿ ಮಾತನಾಡಲು ಮೈಕ್ ನೀಡುವಂತೆ ಪಟ್ಟು ಹಿಡಿದರು. ಅವರು ತಂದಿದ್ದ ಅರ್ಜಿ ಅಲ್ಲಿದ್ದ 40 ಕುಟುಂಬಗಳನ್ನು ಜಾಗದಿಂದ ಒಕ್ಕಲೆಬ್ಬಿಸುವಂತಹದ್ದಾಗಿತ್ತು ಎಂದು ತಿಳಿಸಿದರು.

ಶಾಸಕರ ಸಂಚಿನ ಅಪ ಪ್ರಚಾರ ತಡೆಯಲು ಗದರಿಸಿದ್ದೆ



"ಒಂದು ವೇಳೆ ಎಎಪಿ ಮುಖಂಡರು ಮೈಕ್‌ನಲ್ಲಿ ಆ 40 ಕುಟುಂಬಗಳ ವಿರುದ್ಧ ಮಾತನಾಡಿದ್ದರೆ, ಆಕ್ರೋಶಗೊಂಡ ಜನರೇ ಅವರ ಮೇಲೆ ದಾಳಿ ಮಾಡುತ್ತಿದ್ದರು. ತರುವಾಯ, ಶಾಸಕರೇ ಜನರನ್ನು ಎತ್ತಿಕಟ್ಟಿ ದಾಳಿ ಮಾಡಿಸಿದ್ದಾರೆ ಎಂದು ನನ್ನ ಮೇಲೆಯೇ ಅಪಪ್ರಚಾರ ಮಾಡಲು ಅವರು ಸಂಚು ರೂಪಿಸಿದ್ದರು. ಈ ಅಪಾಯದ ಮುನ್ಸೂಚನೆ ಸಿಕ್ಕಿದ್ದರಿಂದಲೇ ನಾನು ಅವರನ್ನು ಗದರಿಸಿ ಕಳುಹಿಸಿದೆ. ಹಿಡನ್ ಕ್ಯಾಮೆರಾ ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡಲು ಯತ್ನಿಸಿದ ಅವರ ಉದ್ದೇಶ ಈಡೇರದಿದ್ದಾಗ ವಿಡಿಯೋ ವೈರಲ್ ಮಾಡಿದ್ದಾರೆ" ಎಂದು ಶಾಸಕರು ಆರೋಪಿಸಿದ್ದಾರೆ.

ಹಣ ವಸೂಲಿ ಗಿರಾಕಿಗಳು:

ಎಎಪಿ ಮುಖಂಡರ ವಿರುದ್ಧ ವಾಗ್ದಾಳಿ

ಎಎಪಿ ಮುಖಂಡರು ಕಳೆದ ಮೂರ್ನಾಲ್ಕು ವರ್ಷಗಳಿಂದ ಪಾವಗಡ ತಾಲೂಕಿನಲ್ಲಿ ಪ್ರತಿಯೊಬ್ಬರಿಗೂ ಕಿರುಕುಳ ನೀಡುತ್ತಿದ್ದಾರೆ ಎಂದು ಶಾಸಕರು ಕಟುವಾಗಿ ವಾಗ್ದಾಳಿ ನಡೆಸಿದ್ದಾರೆ. "ಕೋಟಿಗಟ್ಟಲೆ ವೆಚ್ಚದಲ್ಲಿ ನಿರ್ಮಿಸಿದ ದೇವಸ್ಥಾನದ ವಿಚಾರದಲ್ಲೂ ತೊಂದರೆ ಕೊಟ್ಟಿದ್ದಾರೆ. ಯಾರಾದರೂ ಸೈಟ್ ಡೆವಲಪ್‌ಮೆಂಟ್ ಮಾಡುತ್ತಿದ್ದರೆ ಅವರ ಮೇಲೆ ಕೇಸ್ ಹಾಕಿ, ಮಾನಸಿಕ ಹಿಂಸೆ ನೀಡಿ ಹಣ ವಸೂಲಿ ಮಾಡುವುದೇ ಇವರ ಕೆಲಸ. ಬೆಂಗಳೂರಿನಲ್ಲಿ ಲಕ್ಷಾಂತರ ರೂಪಾಯಿ ವಂಚನೆ ಮಾಡಿ ಪಾವಗಡಕ್ಕೆ ಬಂದಿರುವ ಈ ತಂಡ, ಕೇವಲ ಪಬ್ಲಿಸಿಟಿಗಾಗಿ ಮತ್ತು ಜನರನ್ನು ಹೆದರಿಸಿ ದುಡ್ಡು ಮಾಡಲು ಈ ರೀತಿ ನಾಟಕವಾಡುತ್ತಿದೆ" ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

"ಹಾರ್ಟ್ ಸೇಫ್ ತುಮಕೂರು" ಅಭಿಯಾನದಡಿ ವಿದ್ಯಾರ್ಥಿಗಳಿಗೆ CPR ತರಬೇತಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: **"Heart Safe Tumkur – A People's CPR Movement"** ಅಭಿಯಾನದ ಅಂಗವಾಗಿ ತುಮಕೂರು ವಿಶ್ವ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಸೋಮವಾರ **CPR (Cardiopulmonary Resuscitation)** ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತುರ್ತು ಸಂದರ್ಭಗಳಲ್ಲಿ ಹೃದ್ರೋಗಿಗಳಿಗೆ ಸಕಾಲದಲ್ಲಿ ಪ್ರಥಮ ಚಿಕಿತ್ಸೆ ನೀಡುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸುವ ಉದ್ದೇಶದಿಂದ ಈ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯ ಕ್ರಮವನ್ನುದ್ದೇಶಿಸಿ ಮಾತನಾಡಿದ ಜಿಲ್ಲಾಧಿಕಾರಿ ಶುಭ ಕಲ್ಯಾಣ್, ಜಿಲ್ಲೆಯಲ್ಲಿ CPR ಕುರಿತು ಹೆಚ್ಚಿನ ಅರಿವು ಮೂಡಿಸುವ ನಿಟ್ಟಿನಲ್ಲಿ ಅಂಗನವಾಡಿ ಮೇಲ್ವಿಚಾರಕರಿಗೂ ಇಂತಹ ತರಬೇತಿ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ದೊರೆಯುವ ಮುನ್ನವೇ CPR ನೀಡುವುದು ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದ್ದು, ಸಾರ್ವಜನಿಕರಲ್ಲಿ ಈ ಕುರಿತು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಅವರು ಹೇಳಿದರು.

ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜಿನ ವೈದ್ಯ ಡಾ॥ ತಮೀಮ್ ಹಾಗೂ ತರಬೇತುದಾರರು ವಿದ್ಯಾರ್ಥಿಗಳಿಗೆ ಅಕಖಿನ ಮೂಲಭೂತ ವಿಧಾನ, ಹೃದಯಾಘಾತ ಅಥವಾ ಹೃದಯ ಸ್ತಂಭನದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ತುರ್ತು ಕ್ರಮಗಳು ಹಾಗೂ ಜೀವ ಉಳಿಸುವ ಕೌಶಲ್ಯಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಿದರು.

ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾಲಯದ ಪ್ರಾಂಶುಪಾಲರು, ಅಧಿಕಾರಿಗಳು ಹಾಗೂ ಉಪನ್ಯಾಸಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ತರಬೇತಿಯಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ, CPR ವಿಧಾನವನ್ನು ಪ್ರಾಯೋಗಿಕವಾಗಿ ಕಲಿತುಕೊಂಡರು. ತುರ್ತು ಪರಿಸ್ಥಿತಿಯಲ್ಲಿ ಆತ್ಮವಿಶ್ವಾಸದಿಂದ ಹಾಗೂ ಸಮಯಪ್ರಜ್ಞೆಯಿಂದ ರೋಗಿಗಳಿಗೆ ನೆರವಾಗುವಂತೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲಾಯಿತು. **"Simple Skills. Real Impact. Safer Communities"** ಎಂಬ ಆಶಯದೊಂದಿಗೆ ಯುವಜನರಲ್ಲಿ ಅಕಖ ಅರಿವು ಮೂಡಿಸುವ ಮೂಲಕ ತುಮಕೂರನ್ನು **"Heart Safe District"** ಆಗಿ ರೂಪಿಸುವ ಅಭಿಯಾನಕ್ಕೆ ಮತ್ತಷ್ಟು ಬಲ ನೀಡಲಾಯಿತು. ಮುಂದಿನ ತಿಂಗಳು ವಿಶ್ವ ಹೃದಯ ದಿನಾಚರಣೆ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದ್ದು, ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಅಕಖ ಕುರಿತು ಜ್ಞಾನ ಮತ್ತು ತರಬೇತಿ ಪ್ರತಿಯೊಬ್ಬರಿಗೂ ತಲುಪುವ ಮೂಲಕ ಸುರಕ್ಷಿತ ಹಾಗೂ ಜೀವ ರಕ್ಷಕ ಸಮುದಾಯ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಅವರು ಕರೆ ನೀಡಿದರು.

ಮನೆ ಗಣಪತಿ ಹೊರತು ಪಡಿಸಿ, ಬಯಲಿನ ಗಣಪತಿಗಳಿಗೆ ಅನುಮತಿ ಕಡ್ಡಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಗಣಪತಿ ಹಬ್ಬವನ್ನು ಹಬ್ಬವಾಗಿ ಆಚರಿಸಲು ಪೊಲೀಸ್ ಇಲಾಖೆಯಿಂದ ಯಾವುದೇ ತೊಂದರೆಯಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುವ ರೀತಿಯಲ್ಲಿ ನಡೆದು ಕೊಂಡರೆ ಕಾನೂನಿನ ರೀತಿ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಕೆ.ವಿ. ಎಚ್ಚರಿಕೆ ನೀಡಿದ್ದಾರೆ.

ನಗರದ ಚಿಲುಮೆ ಸಮುದಾಯ ಭವನದಲ್ಲಿ ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಕರೆದಿದ್ದ ತುಮಕೂರು ತಾಲೂಕು ಗಣಪತಿ ಪ್ರತಿಷ್ಠಾಪನಾ ಸಮಿತಿಗಳ ಪಧಾಧಿಕಾರಿಗಳ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಡಿಜೆಗೆ, ಮಾಡಿ ಪೈಡ್ ವೆಹಿಕಲ್‌ಗಳಲ್ಲಿ ಬರುವ ಟ್ಯಾಬ್ಲೋಗಳಿಗೆ ಅವಕಾಶವಿಲ್ಲ. ಒಂದು ಗಣಪತಿಗೆ ಎರಡು ಸ್ಪೀಕರ್ ಬಳಸಲು ಅವಕಾಶವಿದೆ. ಮನೆಯ ಒಳಗೆ ಪ್ರತಿಷ್ಠಾಪಿಸುವ ಗಣಪತಿ ಗಳನ್ನ ಹೊರತು ಪಡಿಸಿ, ಬಯಲಿನಲ್ಲಿ ಪೂಜಿಸುವ ಎಲ್ಲಾ ಗಣಪತಿಗಳಿಗೂ ಅನುಮತಿ ಕಡ್ಡಾಯ ಎಂದು ಸ್ಪಷ್ಟಪಡಿಸಿದರು.

ಡಿಜೆ ಬಳಸಲು ಸುಪ್ರಿಂ ಕೋರ್ಟು ನಿರ್ಭಂದಿಸಿದೆ. ಸಾರ್ವಜನಿಕ ಸ್ಥಳ, ಸ್ಕೂಲು, ಕಾಲೇಜು, ಆಸ್ಪತ್ರೆಗಳು ಹಾಗೂ ವ್ಯಾಪಾರಿ ಸ್ಥಳಗಳ ಮುಂದೆ ಜನರಿಗೆ ತೊಂದರೆಯಾಗದಂತೆ ಮೆರವಣಿಗೆ ಶಾಂತ ರೀತಿಯಿಂದ ನಡೆಯಬೇಕಿದೆ. ಮುಂಚೆಯೇ ಪೊಲೀಸ್ ಇಲಾಖೆಗೆ ತಿಳಿಸಿದರೆ, ಉತ್ಸವದ ದಿನ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಇಲಾಖೆ ತೆಗೆದುಕೊಂಡು, ಗಣೇಶ ಮೆರವಣಿಗೆ ಸುಗಮವಾಗಿ ಸಾಗಲು ಅನುವು ಮಾಡಿ ಕೊಡಲಾಗುವುದು. ಹಾಗಾಗಿ ಗಣಪತಿ ವಿಸರ್ಜನೆಯ ದಿನಾಂಕ ಮತ್ತು ರೂಟ್ ಮ್ಯಾಪ್ ಮೊದಲೇ ತಿಳಿಸಿದರೆ, ಸೂಕ್ತ ಬಂದೋಬಸ್ತ್ ನೆರವಾಗಲಿದೆ. ಸಾಮೂಹಿಕ ಗಣಪತಿ ವಿಸರ್ಜನೆಗೆ ಮುಂದಾದರೆ ಅದಕ್ಕೂ ಸಹ ಪೊಲೀಸ್ ಇಲಾಖೆ ಸಹಕರಿಸಲಿದೆ ಎಂದರು. ಗಣಪತಿ ಪ್ರತಿಷ್ಠಾಪನೆಗೆ ಬೇಕಾದ ಎಲ್ಲಾ ಅನುಮತಿಗಳನ್ನು ಸಿಂಗಲ್ ವಿಂಡೋ(ಏಕಗವಾಕ್ಷಿ) ಮೂಲಕ ವಿತರಿಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ. ಕೆ.ಇ.ಬಿ. ಅನುಮತಿಗೆ ಅವರು ಸ್ಥಳ ಪರಿಶೀಲನೆ ಮಾಡಬೇಕಿರುವುದರಿಂದ ಕೊಂಚ ವಿಳಂಬವಾಗಲಿದ್ದು, ಅವರಿಗೂ ಸಹ ನಿಗದಿತ ಅವಧಿಯೊಳಗೆ ಅನುಮತಿ ನೀಡುವಂತೆ ಕೋರಲಾಗುವುದು ಎಂದ ಎಸ್.ಪಿ. ಅಶೋಕ್ ಕೆ.ವಿ., ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಬಿ.ಹೆಚ್. ರಸ್ತೆಯ ಎರಡು ಬದಿಯ ಕಟ್ಟಲು ಅವಕಾಶವಿದೆ. ಇದಕ್ಕೆ ಸ್ಥಳೀಯ ಸಂಸ್ಥೆಯ ಪರವಾನಗಿ ಅಗತ್ಯ.ಆದರೆ ರಸ್ತೆಯ ಮಧ್ಯದಲ್ಲಿ ಕಟ್ಟಲು ಅವಕಾಶವಿಲ್ಲ ಮತ್ತು ಒಂದು ಧರ್ಮ, ಸಮುದಾಯವನ್ನು ಹಿಯಾಳಿಸುವ ನಿಷೇಧಿತ ಪದಗಳನ್ನು ಮುದ್ರಿಸುವಂತಿಲ್ಲ.ಈಗಾಗಲೇ ಮುದ್ರಕರ ಸಭೆಯಲ್ಲಿ ಅವರಿಗೆ ಸೂಚನೆ ನೀಡಲಾಗಿದೆ.

ಉದ್ಯಮದ ಅಗತ್ಯಕ್ಕೆ ತಕ್ಕಂತೆ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಿ: ಡಾ.ಜಿ.ಪರಮೇಶ್ವರ ಕರೆ

ಸಿದ್ಧಾರ್ಥ ಸ್ಕೂಲ್ ಆಫ್ ಇಂಜನಿಯರಿಂಗ್‌ನಲ್ಲಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ

ಸೂರ್ಯಪ್ರಗತಿನ್ಯೂಸ್.ಕಾಂ





ತುಮಕೂರು: ಬದಲಾಗುತ್ತಿರುವ ತಂತ್ರಜ್ಞಾನ, ವಿಶೇಷವಾಗಿ ಕೃತಕ ಬುದ್ಧಿಮತ್ತೆ (AI), ಕುರಿತು ನಿರಂತರವಾಗಿ ಕಲಿಯಬೇಕು. ಜೊತೆಗೆ ಉದ್ಯಮದ ಅಗತ್ಯಗಳಿಗೆ ತಕ್ಕಂತೆ ತಮ್ಮ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು ಎಂದು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಹೇ ವಿಶ್ವವಿದ್ಯಾಲಯದ ಕುಲಾಧಿಪತಿಗಳು ಹಾಗೂ ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ ಅವರು ಕರೆ ನೀಡಿದರು.

ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿಯ ಕ್ಯಾತಸಂದ್ರ ಟೋಲ್ ಗೇಟ್ ಬಳಿ ಇರುವ ಸಿದ್ಧಾರ್ಥ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೋಮವಾರದಂದು ಹೊಸ ಬ್ಯಾಚ್ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಿಕ್ಷಣ ಮತ್ತು ಉದ್ಯಮದ ನಡುವಿನ ಅಂತರವನ್ನು ಕಡಿಮೆ ಮಾಡಲು ಕಂಪನಿಗಳು ವಿದ್ಯಾರ್ಥಿಗಳಿಗೆ ಜ್ಞಾನ, ತರಬೇತಿ ಮತ್ತು ಅವಕಾಶಗಳನ್ನು ನೀಡಬೇಕು ಎಂದು ಅಭಿಪ್ರಾಯಪಟ್ಟ ಅವರು ಉನ್ನತ ಶಿಕ್ಷಣದಲ್ಲಿ ಅಭೂತಪೂರ್ವ ಸವಾಲುಗಳು ಮತ್ತು ಅವಕಾಶಗಳಿವೆ. ಅಧ್ಯಾಪಕರು ಪಠ್ಯಪುಸ್ತಕಗಳ ಜೊತೆಗೆ ಸಂಶೋಧನಾ ಪತ್ರಿಕೆಗಳು ಮತ್ತು ಹೊಸ ತಂತ್ರಜ್ಞಾನಗಳ ಮೂಲಕ ತಮ್ಮ ಜ್ಞಾನವನ್ನು ನಿರಂತರವಾಗಿ ಉನ್ನತೀಕರಿಸಿಕೊಂಡು ವಿದ್ಯಾರ್ಥಿಗಳನ್ನು ಭವಿಷ್ಯದ ಸವಾಲುಗಳಿಗೆ ಸಿದ್ಧಪಡಿಸಬೇಕು ಎಂದು ಡಾ.ಜಿ.ಪರಮೇಶ್ವರ ಕರೆ ನೀಡಿದರು.ಯಾವುದೇ ಒಂದು ದೇಶ ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ ಇಂಜಿನಿಯರಿಂಗ್ ಶಿಕ್ಷಣವನ್ನು ಪ್ರಮುಖವಾಗಿ ಬಳಸಿಕೊಳ್ಳುತ್ತಿದೆ. ಸಂಸ್ಥೆಯನ್ನು ಮತ್ತಷ್ಟು ಅಭಿವೃದ್ಧಿಪಡಿಸಿ, ರಾಜ್ಯದ ಪ್ರಮುಖ ಎಂಜಿನಿಯರಿಂಗ್ ಸಂಸ್ಥೆಗಳ ಮಟ್ಟಕ್ಕೆ ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜನ್ನು ಉನ್ನತೀಕರಿಸುವ ಗುರಿಯನ್ನು ಹೊಂದಿರುವುದಾಗಿ ಅವರು ತಿಳಿಸಿದರು.

ಮುಖ್ಯ ಅತಿಥಿಯಾಗಿ ಜೆಸಿಸಿ ಕೈಂಡ್ರಿಲ್ ಉದ್ಯಮದ ಉಪಾಧ್ಯಕ್ಷರು ಪ್ರಶೋಭ್ ಚಂದ್ರಕಾಂತ ಮಾತನಾಡಿ, ವಿದ್ಯಾರ್ಥಿಗಳ ಭವಿಷ್ಯದಲ್ಲಿ ತಾಂತ್ರಿಕ ಜ್ಞಾನಕ್ಕೆ ಸಮಾನವಾಗಿ ಉತ್ತಮ ಕಥೆ ನಿರೂಪಣೆ, ಕುತೂಹಲ ಸಂಗತಿಗಳ ವ್ಯಾಖ್ಯಾನ, ಸಂದಿಗ್ಧ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಳ್ಳುವ ಗುಣ, ಸಹಾನುಭೂತಿ ಮತ್ತು ಧೈರ್ಯದಂತಹ ಗುಣಗಳನ್ನು ಸಂವನಕ್ಕಾಗಿ ಬೆಳಿಸಿಕೊಳ್ಳಿ ಎಂದು ಕರೆ ನೀಡಿದರು.

ಕೃತಕ ಬುದ್ಧಿಮತ್ತೆ ಬೆಳವಣಿಗೆಯಿಂದ ಉದ್ಯೋಗಗಳ ಸ್ವರೂಪ ಬದಲಾಗಬಹುದು, ಆದರೆ ಕೆಲಸದ ಅವಕಾಶಗಳು ಸಂಪೂರ್ಣವಾಗಿ ಕಣ್ಮರೆಯಾಗುವುದಿಲ್ಲ ಎಂದ ಅವರು ವಿದ್ಯಾರ್ಥಿಗಳು ಕೇವಲ ಉತ್ತಮ ಅಂಕಗಳು ಮತ್ತು ಉದ್ಯೋಗಗಳತ್ತ ಗಮನಹರಿಸದೆ, ಸಮಾಜದಲ್ಲಿ ತಮ್ಮದೇ ಆದ ಪ್ರಭಾವ ಮತ್ತು ಗುರುತನ್ನು ನಿರ್ಮಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಐಬಿಎಂನ ಮಾಜಿ ಉಪಾಧ್ಯಕ್ಷ ಸತ್ಯೇನ್ ಪಾರಿಖ್ ಅವರು ಮಾತನಾಡಿ, ವಿದ್ಯಾರ್ಥಿಗಳು ಪದವಿಯ ಜೊತೆಗೆ ತಾಂತ್ರಿಕ ಜ್ಞಾನ, ಸಂವಹನ ಕೌಶಲ್ಯ, ತಂಡದ ಕೆಲಸ ಮತ್ತು ಸಮಸ್ಯೆ ಪರಿಹರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ವೇಗವಾಗಿ ಬದಲಾಗುತ್ತಿರುವ ಎಐ, ರೊಬೋಟಿಕ್ಸ್ ಮತ್ತು ಯಾಂತ್ರೀಕೃತಗೊಂಡ ತಂತ್ರಜ್ಞಾನಗಳೊಂದಿಗೆ ಹೊಂದಿಕೊಳ್ಳಲು ನಿರಂತರ ಕಲಿಕೆ ಅಗತ್ಯ ಎಂದರು.

ಅಂಕಗಳಿಗೆ ಮಾತ್ರ ಸೀಮಿತವಾಗದೆ, ವಿದ್ಯಾರ್ಥಿಗಳು ಹೊಸ ವಿಚಾರಗಳನ್ನು ಅನ್ವೇಷಿಸಿ, ತಮ್ಮ ಜ್ಞಾನವನ್ನು ನೈಜ ಜಗತ್ತಿನಲ್ಲಿ ಅನ್ವಯಿಸಬೇಕು ಎಂದು ಕರೆ ನೀಡಿದ ಅವರು ತಂತ್ರಜ್ಞಾನವನ್ನು ವಿವೇಚನೆಯಿಂದ ಬಳಸಿಕೊಂಡು, ಸವಾಲುಗಳನ್ನು ಎದುರಿಸಿ ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು. ಸಾಹೇ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಡಾ ಕೆ.ಬಿ. ಲಿಂಗೇಗೌಡ, ಕುಲಸಚಿವರಾದ ಡಾ. ಅಶೋಕ್ ಮೆಹ್ತಾ, ಕುಲಾಧಿಪತಿಗಳ ಸಲಹೆಗಾರಾರದ ಡಾ.ವಿವೇಕ್ ವೀರಯ್ಯ, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ. ಸುನಿಲ್ ಕೆ., ಸಿದ್ಧಾರ್ಥ ಸ್ಕೂಲ್ ಆಫ್ ಇಂಜನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಲ್.ಸಂಜೀವ್ ಕುಮಾರ್, ಎಸ್‌ಎಸ್‌ಐಟಿ ಪ್ರಾಂಶುಪಾಲರಾದ ಡಾ. ಮಹಾಂತೇಶ್ ಎಂ. ನಡಕಟ್ಟಿ, ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ನಂಜುಂಡಪ್ಪ, ಜಿಲ್ಲಾಧಿಕಾರಿಗಳಾದ ಶುಭಕಲ್ಯಾಣ್, ಎಸ್ಪಿ ಅಶೋಕ್, ಕಾಲೇಜಿನ ಶೈಕ್ಷಣಿಕ ವಿಭಾಗದ ಡೀನ್ ಡಾ. ಮಂಜುನಾಥ್‌ಗೌಡ ಎಂ.ಆರ್. ಪ್ರವೇಶಾತಿ ಉಸ್ತುವಾರಿಯ ಪ್ರೊ. ರಾಜೇಶ್ ಎಚ್.ಎಂ. ಹಾಗೂ ಸಂಯೋಜಕರಾದ ಡಾ. ಅಂಜನ್ ಕುಮಾರ್ ಸೇರಿದಂತೆ ವಿಭಾಗ ಮುಖ್ಯಸ್ಥರು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಮತ್ತು ಆಡಳಿತ ಮಂಡಳಿಯ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕೆ.ಎನ್.ಆರ್.ಗೆ ಅಪೆಕ್ಸ್ ಬ್ಯಾಂಕ್‌ಅಧ್ಯಕ್ಷ ಸ್ಥಾನ ನೀಡಿ

ಸರ್ಕಾರಕ್ಕೆ ಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟ ಒತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಮಾಜಿ ಸಚಿವಕೆ. ಎನ್. ರಾಜಣ್ಣರವರನ್ನುರಾಜ್ಯಅಪೆಕ್ಸ್ ಬ್ಯಾಂಕ್‌ಗೆಅಧ್ಯಕ್ಷರನ್ನಾಗಿ ನೇಮಕ ಮಾಡಬೇಕುಎಂದುಜಿಲ್ಲಾ ಹಿಂದುಳಿದ ವರ್ಗಗಳ ಒಕ್ಕೂಟದಅಧ್ಯಕ್ಷಧನಿಯಾಕುಮಾರ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸಹಕಾರಿಕ್ಷೇತ್ರದ ಮುತ್ಸದ್ದಿಗಳು, ಹಿರಿಯಕಾಂಗ್ರೆಸ್ ನಾಯಕರೂ, ಮಾಜಿ ಸಹಕಾರ ಮಂತ್ರಿಗಳಾದ ಕೆ.ಎನ್. ರಾಜಣ್ಣರವರಿಗೆರಾಜ್ಯಅಪೆಕ್ಸ್ ಬ್ಯಾಂಕ್‌ಅಧ್ಯಕ್ಷ ಸ್ಥಾನ ನೀಡಬೇಕು.ತುಮಕೂರುಜಿಲ್ಲೆಯ ಹಿಂದುಳಿದ ವರ್ಗಗಳ ಪಾಲಿಗೆ ದೇವರಾಜುಅರಸುಇದ್ದಂತೆಇರುವಕೆ.ಎನ್.ಆರ್, ರಾಜ್ಯದಲ್ಲಿ ಸಹಕಾರಕ್ಷೇತ್ರದಬೆಳವಣಿಗೆಗೆಶ್ರಮಿಸಿದ್ದಾರೆ.ಜಿಲ್ಲೆಯಎಲ್ಲಾಸಮುದಾಯದಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವಜನಾನುರಾಗಿಯಾಗಿದ್ದಾರೆಎಂದು ಹೇಳಿದ್ದಾರೆ. ಈ ಹಿಂದೆಕಾಂಗ್ರೆಸ್ ಸರ್ಕಾರದಲ್ಲಿ ಸಹಕಾರ ಸಚಿವರಾಗಿಉತ್ತಮಕಾರ್ಯ ನಿರ್ವಹಿಸುತ್ತಿದ್ದಕೆ.ಎನ್. ರಾಜಣ್ಣನವರನ್ನು ವಿನಾಕಾರಣ ಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿದ್ದು, ಹಿರಿಯ ನಾಯಕರಿಗೆ, ತುಮಕೂರುಜಿಲ್ಲೆಗೆತುಂಬಾಅನ್ಯಾಯ ಮಾಡಲಾಗಿದೆ.ಇತ್ತೀಚೆಗಷ್ಟೆ ಮಧುಗಿರಿಯಲ್ಲಿ ನಡದಅಕ್ಷರಆಮೃತಯೋಜನೆಯಡಿಯಲ್ಲಿ ಪ್ರತಿನಿತ್ಯ 1,500 ಪದವಿ ಕಾಲೇಜಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದಊಟದ ವ್ಯವಸ್ಥೆ ಮಾಡಿದ್ದಾರೆ.ಮಧುಗಿರಿಕ್ಷೇತ್ರವನ್ನು ಹಿಂದೆಂದೂ ಮಾಡದಷ್ಟುಅಭಿವೃದ್ಧಿ ಮಾಡಿರುತ್ತಾರೆ.ಇಂತಹ ನಾಯಕಕೆ. ಎನ್. ರಾಜಣ್ಣನವರಿಗೆ ಈ ತಿಂಗಳ 10ರಂದು ನಡೆಯುವಅಪೆಕ್ಸ್ ಬ್ಯಾಂಕ್‌ಅಧ್ಯಕ್ಷ ಸ್ಥಾನದಚುನಾವಣೆಯಲ್ಲಿಅಧ್ಯಕ್ಷರಾಗುವ ಅವಕಾಶ ನೀಡಿಗೌರವಿಸಬೇಕು.ಇಲ್ಲವಾದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆತಕ್ಕ ಪಾಠ ಕಲಿಸಬೇಕಾಗುತ್ತದೆಎಂದುಧನಿಯಾಕುಮಾರ್ ಹೇಳಿದ್ದಾರೆ.

10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ : ಅರ್ಜಿ ಆಹ್ವಾನ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ(ಸಿಡಾಕ್) ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರದ ವತಿಯಿಂದ ಜಿಲ್ಲೆಯಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಬಯಸುವ ನಿರುದ್ಯೋಗಿ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಜಿಲ್ಲಾ ಕೈಗಾರಿಕಾ ಕೇಂದ್ರದಲ್ಲಿ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ತರಬೇತಿಯಲ್ಲಿ ಉದ್ಯಮಶೀಲರ ಗುಣಲಕ್ಷಣ, ಸಾಮರ್ಥ್ಯ, ಉದ್ಯಮಶೀಲತೆಯ ಅಭಿವೃದ್ಧಿಗೆ ಅವಶ್ಯವಿರುವ ಸಾಧನಾ ಪ್ರೇರಣ ತರಬೇತಿ, ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಹಂತ, ಉದ್ಯಮ ಅವಕಾಶಗಳನ್ನು ಗುರುತಿಸುವುದು, ಉದ್ಯಮ ಆಯ್ಕೆಯ ವಿಧಾನ, ಹಣಕಾಸು ನಿರ್ವಹಣೆ, ಮಾರುಕಟ್ಟೆ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಸಣ್ಣ ಉದ್ಯಮ ನಿರ್ವಹಣೆ, ಸರ್ಕಾರದ ಸ್ವಂತ ಉದ್ಯೋಗ ಯೋಜನೆಗಳು, ಯೋಜನಾ ವರದಿ ತಯಾರಿಕೆ, ಇತ್ಯಾದಿ ವಿಷಯಗಳ ಕುರಿತು ಪರಿಣತಿ ಹೊಂದಿರುವ ಅತಿಥಿ ಬೋಧಕರಿಂದ ಉಪನ್ಯಾಸವನ್ನು ಏರ್ಪಡಿಸಲಾಗುವುದು. ತರಬೇತಿ ಭಾಗವಾಗಿ ಕೈಗಾರಿಕಾ ಭೇಟಿಯನ್ನು ಏರ್ಪಡಿಸಿ ಯಶಸ್ವಿ ಉದ್ಯಮಶೀಲರೊಂದಿಗೆ ಚರ್ಚಿಸುವ ಅವಕಾಶ ನೀಡಲಾಗುವುದು. ತರಬೇತಿ ಮುಗಿದ ನಂತರ ಉದ್ಯಮ ಪ್ರಾರಂಭಿಸಲು ಬೆಂಬಲ ಸೇವೆ ಒದಗಿಸಲಾಗುವುದು.

ಅಭ್ಯರ್ಥಿಗಳು 10ನೇ ತರಗತಿ ಪಾಸಾಗಿದ್ದು, 18 ರಿಂದ 45 ವರ್ಷದೊಳಗಿನವರಾಗಿರಬೇಕು. ಅರ್ಜಿ ಸಲ್ಲಿಸಲಿಚ್ಛಿಸುವ ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಯೊಂದಿಗೆ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಆಧಾರ್ ಕಾರ್ಡ್, ಜಾತಿ ಪ್ರಮಾಣಪತ್ರವನ್ನು ಲಗತ್ತಿಸಿ ಸೆಪ್ಟೆಂಬರ್ 15ರೊಳಗಾಗಿ ಉಪ ನಿರ್ದೇಶಕರ ಕಚೇರಿ, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ, ರಿಸರ್ವ್ ಪೊಲೀಸ್ ಮೈದಾನದ ಎದುರು, ಎಸ್.ಐ.ಟಿ. ಬಸ್ ನಿಲ್ದಾಣ, ತುಮಕೂರು–572103 ಇವರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9448812974 /7022746755ನ್ನು ಸಂಪರ್ಕಿಸಬೇಕೆಂದು ಸಲ್ಲಿಸಬೇಕೆಂದು ಸಿಡಾಕ್ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಳಗೇರಿಗಳಲ್ಲಿ ವಾಸವಾಗಿರುವ ಕುಟುಂಬಗಳಿಗೆ ಹಕ್ಕು ಪತ್ರ ವಿತರಣೆ–ಜಿಲ್ಲಾಧಿಕಾರಿ ಶುಭ ಕಲ್ಯಾಣ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಶಿರಾ ತಾಲ್ಲೂಕಿನ ಹುಣಸೆಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕುಡಿಯುವ ನೀರು ಸೇರಿದಂತೆ ವಿವಿಧ ಮೂಲಭೂತ ಸೌಲಭ್ಯಗಳ ಕೊರತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರ ಗಮನಕ್ಕೆ ಬಂದಿತ್ತು. ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ ಸಮಸ್ಯೆಯ ಮೂಲವನ್ನು ಪರಿಶೀಲಿಸಿದಾಗ, ಗ್ರಾಮವು ಇನ್ನೂ ಕಂದಾಯ ಗ್ರಾಮವಾಗಿ ಘೋಷಣೆಯಾಗದಿರುವುದೇ ಅಭಿವೃದ್ಧಿ ಕಾರ್ಯಗಳು ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಲು ಪ್ರಮುಖ ಕಾರಣವೆಂದು ತಿಳಿದು ಬಂದಿತ್ತು.

ಈ ಹಿನ್ನೆಲೆಯಲ್ಲಿ ಉಪ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಡಾ: ಜಿ. ಪರಮೇಶ್ವರ ಅವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿ ಕಂದಾಯ ಗ್ರಾಮಗಳ ರಚನೆಗೆ ವಿಶೇಷ ಆಂದೋಲನ ಕೈಗೊಳ್ಳಲಾಗಿದೆ. ಈ ಅಭಿಯಾನದಡಿ ಇದುವರೆಗೆ 22,000ಕ್ಕೂ ಹೆಚ್ಚು ಕುಟುಂಬಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಮೂಲಕ ಅವರಿಗೆ ಕಾನೂನು ಬದ್ಧ ಹಕ್ಕು ಮತ್ತು ಭದ್ರತೆ ಕಲ್ಪಿಸಲಾಗಿದ್ದು, ಅಲೆಮಾರಿ ಕುಟುಂಬಗಳಿಗೆ ಹಾಗೂ ಹಕ್ಕಿಪಿಕ್ಕಿ ಕಾಲೋನಿಯ ಕುಟುಂಬಗಳಿಗೆ ಹಕ್ಕು ಪತ್ರ ವಿತರಿಸಲಾಗಿತ್ತು. ಪ್ರಸ್ತುತ ನಾಲ್ಕನೇ ಹಂತವಾಗಿ ಖಾಸಗಿ ಒಡೆತನದ ಜಮೀನುಗಳಲ್ಲಿ ನಿರ್ಮಿತ ಕೊಳಗೇರಿಗಳಲ್ಲಿ ವಾಸಿಸುತ್ತಿರುವ 2,617 ಕುಟುಂಬಗಳಿಗೆ ಕರ್ನಾಟಕ ಭೂ ಸುಧಾರಣಾ ಕಾಯ್ದೆ–1971ರ ಕಲಂ 38(ಂ) ಅನ್ವಯ ಖಾಸಗಿ ಕೊಳಗೇರಿ ಪ್ರದೇಶಗಳಲ್ಲಿ ಸರ್ವೆ ಕಾರ್ಯ ಕೈಗೊಂಡು ಸೂಕ್ತ ಕ್ರಮ ವಹಿಸಲಾಗುತ್ತಿದೆ. ಅಲ್ಲದೆ, ಸರ್ಕಾರಿ ಜಾಗಗಳಲ್ಲಿ ಮನೆ ನಿರ್ಮಿಸಿಕೊಂಡು ವಾಸಿಸುತ್ತಿರುವ 349 ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ತುಮಕೂರು ನಗರದ ಎಳ್ಳಾರ ಬಂಡೆ, ಅರಳೀಮರದ ಪಾಳ್ಯ, ಎಸ್.ಎನ್. ಪಾಳ್ಯ, ಭಾರತಿನಗರ, ಬಿದಿರು ಮೆಳೆ ತೋಟ, ಎನ್.ಆರ್. ಕಾಲೋನಿ ಹಾಗೂ ಎಸ್.ಎಲ್.ಎನ್. ನಗರ ಬಡಾವಣೆಗಳಲ್ಲಿರುವ ಸರ್ಕಾರಿ ಜಮೀನಿನಲ್ಲಿ ಮನೆಯನ್ನು ನಿರ್ಮಿಸಿಕೊಂಡು ವಾಸಿಸುತ್ತಿರುವ 349 ಕುಟುಂಬಗಳನ್ನು ಹಕ್ಕು ಪತ್ರ ವಿತರಣೆಯ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. ಖಾಸಗಿ ಜಮೀನುಗಳಲ್ಲಿ ಹಲವು ವರ್ಷಗಳಿಂದ ವಾಸಿಸುತ್ತಿರುವ ಕುಟುಂಬಗಳ ಸಮಸ್ಯೆಗೂ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಜಮೀನನ್ನು



ಸರ್ಕಾರಕ್ಕೆ ಸ್ವಾಧೀನಪಡಿಸಿಕೊಳ್ಳುವ ಅಥವಾ ಸರ್ಕಾರದ ವಶಕ್ಕೆ ಪಡೆಯುವ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಿ, ಅರ್ಹ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸುವ ಯೋಜನೆ ರೂಪಿಸಲಾಗಿದೆ. ಈ ಮೂಲಕ 30 ರಿಂದ 40 ವರ್ಷಗಳಿಂದ ಸ್ವಂತ ಜಮೀನಿನ ಹಕ್ಕಿಗಾಗಿ ಕಾಯುತ್ತಿರುವ ಕುಟುಂಬಗಳಿಗೆ ಕಾನೂನುಬದ್ಧ ಮಾಲೀಕತ್ವ ಮತ್ತು ಭದ್ರತೆ ಒದಗಿಸುವ ಗುರಿ ಹೊಂದಲಾಗಿದೆ.

ತುಮಕೂರು ಮಹಾನಗರ ಪಾಲಿಕೆ ಹಾಗೂ ಭೂ ದಾಖಲೆಗಳ ಇಲಾಖೆಯ ಸಹಯೋಗದಲ್ಲಿ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ ಸರ್ವೆ ಕಾರ್ಯ ನಡೆಯುತ್ತಿದೆ. ಇದರ ಅಂಗವಾಗಿ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಎನ್.ಆರ್. ಕಾಲೋನಿಗೆ ಭೇಟಿ ನೀಡಿ, ಸರ್ವೆ ಕಾರ್ಯದ ಪ್ರಗತಿಯನ್ನು ಪರಿಶೀಲಿಸುವುದರ ಜೊತೆಗೆ ಫಲಾನುಭವಿಗಳಿಂದ ಅವರ ಸಮಸ್ಯೆಗಳು ಹಾಗೂ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು.

ಸರ್ವೆ ಕಾರ್ಯ ಪೂರ್ಣಗೊಂಡ ನಂತರ ನಿಯಮಾನುಸಾರ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರಲ್ಲದೆ, 3000 ಕೊಳಗೇರಿ ಕುಟುಂಬಗಳ 14000 ಜನರಿಗೆ ಇದರಿಂದ ಅನುಕೂಲವಾಗುತ್ತದೆ. ಕೊಳಗೇರಿ ಪ್ರದೇಶಗಳಲ್ಲಿ ವಾಸವಾಗಿರುವ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಲು ಜಿಲ್ಲಾಡಳಿತವು ಐತಿಹಾಸಿಕ ಹೆಜ್ಜೆಯಿಟ್ಟಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತುಮಕೂರು ಮಹಾನಗರ ಪಾಲಿಕೆ ಆಯುಕ್ತ ಶುಭ, ಕೊಳಗೇರಿ ಅಭಿವೃದ್ಧಿ ಮಂಡಳಿಯ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಮಠಾಧೀಶರಿಂದ ಕೆರೆಗೆ ಬಾಗಿನ ಗಂಗಾ ಪೂಜಾ ಕಾರ್ಯಕ್ರಮ

ಸೂರ್ಯಪ್ರಗತಿನ್ಯೂಸ್.ಕಾಂ



ಚಿಕ್ಕನಾಯಕನಹಳ್ಳಿ, ದೇಬೆಘಟ್ಟದಲ್ಲಿ ಅದ್ದೂರಿ ಗಂಗಾ ಪೂಜಾ ಹಾಗು. ಕೆ. ಎಸ್. ಕೆ.ರವರಿಗೆ ಅಭಿನಂದನೆ ಕಾರ್ಯಕ್ರಮ ಚಿಕ್ಕನಾಯಕನಹಳ್ಳಿ ನಗರದ 4ನೇ ವಾರ್ಡ್ ದೇಬೆಘಟ್ಟ ಗ್ರಾಮ ಕೆರೆ ಕೋಡಿ ಯಲ್ಲಿ ಹೇಮಾವತಿ ನೀರು ಕೆರೆ ತುಂಬಿ ಕೋಡಿ ಬಿದ್ದಿರುವ ಹಿನ್ನಲೆಯಲ್ಲಿ ದೇಬೆಘಟ್ಟ ಮತ್ತು ಮುಜುರೆ ಕಲ್ಲೇನಹಳ್ಳಿ ಗ್ರಾಮಸ್ಥರು ಶ್ರೀಮರುಳು ಸಿದ್ದೇಶ್ವರ ಸ್ವಾಮಿ ಶ್ರೀ ಮಾತಾ ಕೆಂಪಮ್ಮ ದೇವಿ ಕರೆಸಿ ಗೋಡೆಕೆರೆ ಶ್ರೀ ಮೃತ್ಯುಂಜಯ ದೇಶಿಕೇಂದ್ರಸ್ವಾಮಿಜೀ ರವರ ಮತ್ತು ತಮಡಿಹಳ್ಳಿ ಶ್ರೀ ಅಭಿನವ ಮಲ್ಲಿಕಾರ್ಜುನ ಸ್ವಾಮಿಜೀ ರವರ ನೇತೃತ್ವದಲ್ಲಿ ಗಂಗಾ ಪೂಜಾ ಕಾರ್ಯಕ್ರಮ ಹಾಗೂ ಕೆರೆಗೆ ಬಾಗಿನ ಅರ್ಪಣೆ ಕಾರ್ಯಕ್ರಮ ನೆಡೆಸಿದರು ಈ ಸಂದರ್ಭದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 26ಕೆರೆಗಳಿಗೆ ನೀರಾವರಿ ಯೋಜನೆ ತರಲು ಶ್ರಮಿಸಿದ ಹಾಗೂ 102ಕೋಟಿ ಹಣ ಬಿಡುಗಡೆ ಮಾಡಿಸಿ ನೀರು. ಪಾಯಿಂಟ್ 8 ಟಿಎಂಸಿ ನಿಗಧಿ ಪಡಿಸಿ ಶಂಕು ಸ್ಥಾಪನೆ ಮಾಡಿಸಿ ಎಲ್ಲಾ ಹೋರಾಟಗಾರರಿಗೆ ಶೆಟ್ಟಿಕೆರೆಯಲ್ಲಿ ಸನ್ಮಾನ ಮಾಡಿ ಗೌರವಿಸಿದ್ದ ಜನಪ್ರಿಯ ಮಾಜಿ ಶಾಸಕರಾದ. ಕೆ ಎಸ್ ಕಿರಣ್ ಕುಮಾರ್ ರವರ ಕೈಯಲ್ಲಿ ಕೆರೆಗೆ ಬಾಗಿನ ಅರ್ಪಣೆ ಮಾಡಿಸಿ ನಂತರ ಅವರನ ಗೌರವಿಸಿದ್ದವೇ ಎಂದು ರೈತರು ತಿಳಿಸಿದರು ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಬಿ ಲಕ್ಕಪ್ಪ ನವರು ಚಿಕ್ಕನಾಯಕನಹಳ್ಳಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ತಾಲ್ಲೂಕು ಗ್ಯಾರಂಟಿ ಯೋಜನಾ ಅಧ್ಯಕ್ಷರುಆದ ಸಿ. ಡಿಚಂದ್ರಶೇಖರ್ ದೇಬೆಘಟ್ಟ ಗ್ರಾಮದ ಜಗದೀಶ್ ನಂದೀಶ್. ಉಮೇಶ್ ಶ್ರೀನಿವಾಸ್ ಕುಮಾರ್ ಸ್ವಾಮೀ ಮರಳು ಸಿದ್ದಯ್ಯಪಂಚಾಕ್ಷರಿ.ಷಡಕ್ಷರಿ ನೀರಾವರಿ ಹೋರಾಟಗಾರ ಅಜ್ಜೆನಹಳ್ಳಿ ಶರತ್ ಕುಮಾರ್ ಸಾವಶೆಟ್ಟಿಹಳ್ಳಿ ಮರಳು ಸಿದ್ದಯ್ಯ ಮೇಲನಹಳ್ಳಿ ನಂಧೀಶ್ ಬೇವಿನಹಳ್ಳಿ ಚನ್ನಬಸವಯ್ಯ ಕೆ. ಜಿ. ಕೃಷ್ಣೆ ಗೌಡರುಕಲ್ಲೇನಹಳ್ಳಿ ರೇವಣ್ಣ ಸುಗಂಧ ರಾಜ್ ಜಿಲ್ಲಾ ಕೆ ಡಿ ಪಿ ಸಾಸಲು ಮಂಜುನಾಥ್ ಪೋಚಕಟ್ಟೆ ರಮೇಶ್ ನವಿಲೇ ಇರ್ಫಾನ್. ನವಿಲೇ ಮಧು. ಗೋಡೆಕೆರೆ ಓಂಕಾರ ಮೂರ್ತಿ ಡಾಬಾ ಸುರೇಶ್ ಹಾಗೂ ರೈತರು ಸೇರಿದಂತೆ ನೀರಾವರಿ ಹೋರಾಟಗಾರರು ಗ್ರಾಮದ ನೂರಾರು ಜನರು ಮಕ್ಕಳು ಮಹಿಳೆಯರು ಭಾಗವಹಿಸಿ ಕಿರಣ್ ಕುಮಾರ್ ರವರಿಗೆ ಕೃಜ್ಞತೆ ಸಲ್ಲಿಸಿದರು

ಸುಪ್ರೀಂ ಕೋರ್ಟ್ ಆದೇಶ: ಪಾಲಿಕೆಯಿಂದ ಬೀದಿಬದಿ ವ್ಯಾಪಾರಿಗಳಿಗೆ ಪರ್ಯಾಯ ಮಾರಾಟ ವಲಯ ನಿಗದಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಪಾದಚಾರಿ ಮಾರ್ಗಗಳ ನಿರ್ವಹಣೆ ಹಾಗೂ ಸಂರಕ್ಷಣೆಗೆ ಸಂಬಂಧಿಸಿದಂತೆ ಘನ ಸರ್ವೋಚ್ಚ ನ್ಯಾಯಾಲಯದ (ಸಿವಿಲ್ ಅಪೀಲ್ ನಂಬರ್ 4665–4666/2025, ದಿನಾಂಕ: 19.06.2026) ಆದೇಶದ ಅನ್ವಯ ತುಮಕೂರು ಮಹಾನಗರ ಪಾಲಿಕೆಯು ನಗರದ ಪ್ರಮುಖ ರಸ್ತೆಗಳಲ್ಲಿದ್ದ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಿ, ಸೂಕ್ತ ಪರ್ಯಾಯ ವ್ಯಾಪಾರ ವಲಯಗಳನ್ನು (**Vending Zones**) ನಿಗದಿಪಡಿಸಿದೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಪಾದಚಾರಿ ಮಾರ್ಗದಲ್ಲಿ ನಡೆದಾಡುವುದು ಪ್ರಜೆಗಳ ಮೂಲಭೂತ ಹಕ್ಕು ಎಂದು ಸಾರಲಾಗಿದ್ದು, ಈ ಹಿನ್ನೆಲೆಯಲ್ಲಿ ನಗರ ಅಭಿವೃದ್ಧಿ ಪ್ರಾಧಿಕಾರ ಹಾಗೂ ಮಹಾನಗರ ಪಾಲಿಕೆಗಳು ಕಾಲುದಾರಿಗಳನ್ನು ಸಂರಕ್ಷಿಸುವುದು ಕಡ್ಡಾಯವಾಗಿದೆ.

ರೈಲ್ವೆ ಸ್ಟೇಷನ್ ಬಳಿ ವ್ಯಾಪಾರಕ್ಕೆ ನಿಷೇಧ – ಸ್ಪಷ್ಟನೆ:'ಸಮೃದ್ಧಿ ಬೀದಿ ಬದಿ ವ್ಯಾಪಾರಸ್ಥರ ಸಂಘ'ದ ಪದಾಧಿಕಾರಿಗಳು ರೈಲ್ವೇ ನಿಲ್ದಾಣದ ಬಳಿಯ ಹುಣಸೇ ಮರದ ಪಾದಚಾರಿ ಮಾರ್ಗದಲ್ಲಿ ಜಾಗ ನೀಡುವಂತೆ ಪಟ್ಟು ಹಿಡಿದಿದ್ದು, ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.

ಹೊಸದಾಗಿ ಘೋಷಿಸಲಾದ ಪ್ರಮುಖ

ವ್ಯಾಪಾರ ವಲಯಗಳ ಪಟ್ಟಿ:

ಅಂತರಸನಹಳ್ಳಿ ಎಪಿಎಂಸಿ ಮಾರುಕಟ್ಟೆ ಸುತ್ತಮುತ್ತ ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ಕಛೇರಿ ಮುಂಭಾಗ, ಕುಣಿಗಲ್ ರಸ್ತೆಯ ಎರಡೂ ಬದಿ, ಕರ್ನಾಟಕ ಸ್ಟೇಟ್ ಬ್ಯಾಂಕ್ ಪ್ರಾದೇಶಿಕ ಕಛೇರಿ ಮುಂಭಾಗದ ರಸ್ತೆಯ ಎಡಭಾಗ ಕಾಲ್ಟೆಕ್ಸ್ ಸರ್ಕಲ್ (ಲಕ್ಕಪ್ಪ ವೃತ್ತ) ದಿಂದ ಜೆ.ಸಿ. ರಸ್ತೆ ಜೆ.ಸಿ. ರಸ್ತೆಯಲ್ಲಿನ ಮಾರಿಯಮ್ಮ ನಗರದ ಮಾರಾಟ ವಲಯ ಅಶೋಕ ರಸ್ತೆಯ ಎರಡೂ ಬದಿ ಖಾಸಗಿ ಬಸ್ ಸ್ಟ್ಯಾಂಡ್ ಬಳಿ ಇರುವ ಮಾರಾಟ ವಲಯ ಎಂ.ಜಿ. ರಸ್ತೆ ಹಾಗೂ ವಿವೇಕಾನಂದ ರಸ್ತೆ ಗುಬ್ಬಿ ವೀರಣ್ಣ ಕಲಾಕ್ಷೇತ್ರದ ಮುಂಭಾಗ (ಹಳೇ **KSRTC** ಡಿಪೋ ಹಿಂಭಾಗ) ಬಿ.ಎಚ್. ರಸ್ತೆ (ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣ ಎದುರು) **DDPI** ಕಚೇರಿ ಬಳಿ ಇರುವ ಟೌನ್‌ಹಾಲ್ ಹಿಂಭಾಗದ ಮಾರಾಟ ವಲಯ ಪ್ರವಾಸಿ ಮಂದಿರದ ರಸ್ತೆ ಸುತ್ತ ಮುತ್ತ ಉಪ್ಪಾರಹಳ್ಳಿ ಅಂಡರ್ ಬ್ರಿಡ್ಜ್ ಬಳಿಯ ಮಾರಾಟ ವಲಯ ಎಂ.ಎಸ್.ಆರ್. ಲೈನ್ ನಿಂದ ಬಟವಾಡಿ ಬೈಪಾಸ್ ಕಾಲೇಜು ರಸ್ತೆ ಮಾರಾಟ ವಲಯ ಕೋತಿತೋಪು ರಸ್ತೆಯಿಂದ ಎಂ.ಎಸ್.ಆರ್. ರಸ್ತೆ ಜಯನಗರ ಮಾರಾಟ ವಲಯ ಆಟೋಸ್ಟಾಂಡ್ ರಸ್ತೆ ಬಳಿ ಎಂ.ಎಸ್.ಆರ್. ಲೈನ್ ಬಳಿಯ ಮಾರಾಟ ವಲಯ



ಆದರೆ, ಕರ್ನಾಟಕ ಬೀದಿಬದಿ ವ್ಯಾಪಾರಿಗಳ ಕಾಯ್ದೆ 2014 ಮತ್ತು 2020ರ ನಿಯಮಾವಳಿ ಪ್ರಕಾರ ಯಾವುದೇ ಸರ್ಕಾರಿ ಕಚೇರಿ, ಬಸ್ ನಿಲ್ದಾಣ, ಅಥವಾ ರೈಲ್ವೇ ನಿಲ್ದಾಣಗಳ ಆವರಣದಿಂದ 100 ಮೀಟರ್ ವ್ಯಾಪ್ತಿಯಲ್ಲಿ ವ್ಯಾಪಾರ ವಲಯ ಘೋಷಿಸಲು ಕಾನೂನಿನಲ್ಲಿ ಅವಕಾಶವಿಲ್ಲ. ಅಲ್ಲದೆ, ಆ ಭಾಗದಲ್ಲಿ ರೈಲ್ವೇ ಕಾಮಗಾರಿಗಳು ಚಾಲ್ತಿಯಲ್ಲಿದ್ದು, ಪೊಲೀಸ್ ಇಲಾಖೆಯಿಂದ ರಸ್ತೆ ಬಂದ್ ಮಾಡಲಾಗಿದೆ ಹಾಗೂ ಪ್ರವಾಸಿ ಮಂದಿರಕ್ಕೆ ಗಣ್ಯರ ಭೇಟಿ ಹೆಚ್ಚಿರುವುದರಿಂದ ಸಂಚಾರ ದಟ್ಟಣೆ ನಿಯಂತ್ರಿಸಲು ಅಲ್ಲಿ ಜಾಗ ನೀಡಲು ಸಾಧ್ಯವಿಲ್ಲ ಎಂದು ಪಾಲಿಕೆ ಸ್ಪಷ್ಟಪಡಿಸಿದೆ. ಮೂಲಭೂತ ಸೌಕರ್ಯ ಒದಗಿಸಲು ಪಾಲಿಕೆ ಬದ್ಧ:ಆಗಸ್ಟ್ 12 ರಿಂದ ಆರಂಭಗೊಂಡ ಪಾದಚಾರಿ ಮಾರ್ಗ ತೆರವು ಕಾರ್ಯಾಚರಣೆಗೆ ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಪಾಲಿಕೆಯು ನಿಗದಿಪಡಿಸಿರುವ ವ್ಯಾಪಾರ ವಲಯಗಳಲ್ಲಿ ನಿರತರಾಗಿರುವ ಎಲ್ಲಾ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿಗಳನ್ನು ವಿತರಿಸಿ, ಕುಡಿಯುವ ನೀರು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತುಮಕೂರು ಮಹಾನಗರಪಾಲಿಕೆ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಶ್ರೀ ಕೃಷ್ಣಜನ್ಮಾಷ್ಟಮಿಯಲ್ಲಿ ಭಾವೈಕ್ಯತೆ ಸಾರಿದ ತಮಿಳು ಕಾಲೋನಿ ಅಂಗನವಾಡಿ ಮಕ್ಕಳು

ಸೂರ್ಯಪ್ರಗತಿನ್ಯೂಸ್.ಕಾಂ



ತಿಪಟೂರು : ನಗರದ ತಮಿಳು ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ಶ್ರೀಕೃಷ್ಣಜನ್ಮಾಷ್ಟಮಿ ಪ್ರಯುಕ್ತ ವಿಶೇಷವಾಗಿ ಭಾವೈಕ್ಯತೆ ಸಾರುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಸ್ಲಿಂ ಸಮುದಾಯದ ಮಕ್ಕಳ ಪೋಷಕರೇ ತಮ್ಮ ಮಕ್ಕಳಿಗೆ ರಾಧೆ ಹಾಗೂ ಶ್ರೀಕೃಷ್ಣನ ವೇಷಭೂಷಣಗಳನ್ನು ತೊಡಿಸಿ ಸಂಭ್ರಮಿಸಿದರು. ಮಕ್ಕಳು ಪರಸ್ಪರ ಸಿಹಿ ತಿನಿಸುವ ಮೂಲಕ ಹಬ್ಬದ ಸಂತಸವನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶಿವಮ್ಮ ಸಹಾಯಕಿ ರೇಖಾ ಉಪಸ್ಥಿತರಿದ್ದರು.

ವಿವಿಧ ಧರ್ಮಗಳ ಮಕ್ಕಳು ಒಟ್ಟಾಗಿ ಹಬ್ಬವನ್ನು ಆಚರಿಸುವ ಮೂಲಕ ಧರ್ಮ, ಜಾತಿ ಭೇದವಿಲ್ಲದೆ ಮಕ್ಕಳಲ್ಲಿ ಪರಸ್ಪರ ಪ್ರೀತಿ, ಸಹೋದರತ್ವ ಹಾಗೂ ಭಾವೈಕ್ಯತೆಯ ಮನೋಭಾವ ಬೆಳೆಸುವ ಸಂದೇಶವನ್ನು ಈ ಕಾರ್ಯಕ್ರಮ ಸಾರಿತು. ಅಂಗನವಾಡಿ ಕೇಂದ್ರದ ಈ ವಿಶೇಷ ಆಚರಣೆ ಸ್ಥಳೀಯರ ಗಮನ ಸೆಳೆಯುವುದರ ಜೊತೆಗೆ, ಮಕ್ಕಳಲ್ಲಿ ಬಾಲ್ಯದಿಂದಲೇ ಸೌಹಾರ್ದತೆ ಮತ್ತು ಸಾಮರಸ್ಯದ ಮೌಲ್ಯಗಳನ್ನು ಬೆಳೆಸುವ ಉತ್ತಮ ಮಾದರಿಯಾಗಿದೆ.

ಪೂರ್ಣಚಂದ್ರ ತೇಜಸ್ವಿ ಸಾಹಿತಿಯಷ್ಟೇ ಅಲ್ಲ ನಿಸರ್ಗ ವಿಜ್ಞಾನಿ, ಸಂಶೋಧಕ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ಎಡಪಂಥೀಯ ವಿಚಾರಗಳ ಕೆ.ಪಿ ಪೂರ್ಣಚಂದ್ರ ತೇಜಸ್ವಿ ಸಾಹಿತಿಯಷ್ಟೇ ಅಲ್ಲ ನಿಸರ್ಗ ವಿಜ್ಞಾನಿ, ಸಂಶೋಧಕರು ಕುವೆಂಪುರವರ ಪುತ್ರ ಎಂದು ಸಾಹಿತಿ ಮ.ಲ.ನ.ಮೂರ್ತಿ ಅಭಿಪ್ರಾಯಪಟ್ಟರು.

ಪಟ್ಟಣದ ಸಹೃದಯ ಬಳಗ ಶ್ರೀ ಟಿ.ವಿ.ವಿ.ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ತೇಜಸ್ವಿಯವರ ಜನ್ಮ ದಿನಾಚರಣೆಯಲ್ಲಿ ಮಾತನಾಡಿ, ಲೋಹಿಯಾ ಚಿಂತನೆಗಳಿಂದ ಪ್ರಭಾವಿತರಾದ ತೇಜಸ್ವಿ ಕನ್ನಡ ಸಾಹಿತ್ಯ ಪರಿಸರವನ್ನು ವಿಸ್ತರಿಸಿದ್ದಾರೆ.' ಬೃಹನ್ನಳೆ– –ಸೋಮುವಿನ ಸ್ವಗತ ಲಹರಿ' 'ಅವರ ಏಕೈಕ ಕವನ ಸಂಕಲನ.

'ಯಮಳ ಪ್ರಶ್ನೆ' ನಾಟಕದಲ್ಲಿ ಕೆಟ್ಟು ನಿಂತ ಮೋಟಾರ್ ಸೈಕಲ್ , ತರುಣರಿಬ್ಬರ ಸಂವಾದದಿಂದ ಪರಿಹರಿಸಲಾಗದಷ್ಟು ಸಮಸ್ಯೆಯ ಪರಿಚಯವಾಗುತ್ತದೆ. ಹುಲಿಯೂರಿನ ಸರಹದ್ದು, ಅಬಚೂರಿನ ಪೋಸ್ಟಾಫೀಸು ,,ಕಥಾಸಂಕಲನಗಳು, ಸ್ವರೂಪ, ನಿಗೂಢ ಮನುಷ್ಯರು, ಕರ್ವಾಲೋ,. ಕಾದಂಬರಿಗಳು. ಅವರು ರಾಜ್ಯ ಮತ್ತು ಕೇಂದ್ರಸಾಹಿತ್ಯ ಅಕಾಡೆಮಿ ಪುರಸ್ಕೃತರು. ಅವರ ಸಾಹಿತ್ಯ ಕೃತಿ ಇತರೆ ಭಾಷೆಗಳಿಗೂ ಅನುವಾದಗಳಾಗಿ.ವೆ.

ತಬರನ ಕತೆ , ಅಬಚೂರಿನ ಪೋಸ್ಟಾಫೀಸು ,ಕುಬಿ ಮತ್ತು ಇಯಾಲ ಚಲನಚಿತ್ರಗಳಾಗಿ ಪ್ರಶಸ್ತಿ ಪಡೆದು ಜನ ಮೆಚ್ಚುಗೆ ಗಳಿಸಿವೆ. ಎಂದರು.

ಪ್ರಾಂಶುಪಾಲ ಹನುಮಂತರಾಯಪ್ಪ ತೇಜಸ್ವಿಯವರ ಸಾಹಿತ್ಯಕ ಸಾಧನೆ ಕುರಿತು ತಿಳಿಸಿದರು. ಬಳಗದ ಕಾರ್ಯದರ್ಶಿ ಜಿ.ಎಸ್.ನಾಗಭೂಷಣ ಸ್ವಾಗತಿಸಿ, ಉಪನ್ಯಾಸಕೀ ಪಲ್ಲವಿ ನಿರೂಪಿಸಿ,ವಂದಿಸಿದರು.

ವಾಲಿಬಾಲ್‌ನಲ್ಲಿ ಮಿಥುನ್ ಎಸ್. ಚಿನ್ನದ ಪದಕ; ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ಗೆ ಯಶವಂತ್ ಸಿ.

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಕ್ರೀಡಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡುವ ಮೂಲಕ ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ. ವಿದ್ಯಾನಿಕೇತನ ಪಿಯು ಕಾಲೇಜಿನ ವಿದ್ಯಾರ್ಥಿ ಮಿಥುನ್ ಎಸ್. ಹಾಗು ಧನುಷ್. ಎನ್ ಅವರು ವಾಲಿಬಾಲ್‌ನಲ್ಲಿ ನ್ಯಾಷನಲ್ ಝೋನಲ್ ಸೀರೀಸ್‌ನಲ್ಲಿ ಚಿನ್ನದ ಪದಕ ಗೆದ್ದು, ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಕ್ರೀಡಾ ಕ್ಷೇತ್ರದಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಇದೇ ಸಂದರ್ಭದಲ್ಲಿ ಸಂಸ್ಥೆಯ ಮತ್ತೊಬ್ಬ ಕ್ರೀಡಾ ಪ್ರತಿಭೆ ಯಶವಂತ್ ಸಿ. ಅವರು ಅಥ್ಲೆಟಿಕ್ಸ್‌ನ 200 ಮೀಟರ್ ಓಟದಲ್ಲಿ ಏಷ್ಯನ್ ಗೇಮ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಸೆಲೆಕ್ಷನ್ ಟ್ರಯಲ್ಸ್ 2026ಕ್ಕೆ ಆಯ್ಕೆಯಾಗಿರುವುದು ವಿದ್ಯಾನಿಕೇತನದ ಕ್ರೀಡಾ ಸಾಧನೆಗೆ ಮತ್ತೊಂದು ಗರಿಮೆ ತಂದಿದೆ.

ತುಮಕೂರಿನ ಸರಸ್ವತಿಪುರಂ ವಿದ್ಯಾನಿಕೇತನ ಪಿ.ಯು ಕಾಲೇಜಿನ ವಿದ್ಯಾರ್ಥಿ ಮಿಥುನ್ ಎಸ್. ಹಾಗು ಧನುಷ್ ಎನ್ ಅವರು ವಾಲಿಬಾಲ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ನ್ಯಾಷನಲ್ ಝೋನಲ್ ಸೀರೀಸ್‌ನಲ್ಲಿ ಚಿನ್ನದ ಪದಕ ತಮ್ಮದಾಗಿಸಿಕೊಂಡಿದ್ದಾರೆ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಅವರು ಈ ಸಾಧನೆ ಮಾಡಿರುವುದು ವಿಶೇಷವಾಗಿದೆ. ಖೇಲೋ



ಭಾರತ್ ಯೂತ್ ಗೇಮ್ಸ್ ಹಾಗೂ ಫೆಡರೇಶನ್ ಆಫ್ ಇಂಡಿಯಾ ಸಂಬಂಧಿತ ರಾಷ್ಟ್ರೀಯ ಮಟ್ಟದ ಕ್ರೀಡಾ ವೇದಿಕೆಯಲ್ಲಿ ಮಿಥುನ್ ತೋರಿದ ಸಾಮರ್ಥ್ಯವು ಅವರ ಕಠಿಣ ಪರಿಶ್ರಮ, ಶಿಸ್ತು, ತರಬೇತಿ ಹಾಗೂ ಕ್ರೀಡೆಯ ಮೇಲಿನ ಬದ್ಧತೆಗೆ ಸಾಕ್ಷಿಯಾಗಿದೆ.

ಮಿಥುನ್ ಹಾಗು ಧನುಷ್ ಎನ್ ಅವರ ಈ ಸಾಧನೆಯ ಬೆನ್ನಲ್ಲೇ ವಿದ್ಯಾನಿಕೇತನದ ಯಶವಂತ್ ಸಿ. ಅವರು ಅಥ್ಲೆಟಿಕ್ಸ್‌ನಲ್ಲಿ ಹೊಸ ಮೈಲಿಗಲ್ಲು ಸಾಧಿಸಿದ್ದಾರೆ. ಅಂಡರ್ 18 (ಯು 18) ಪುರುಷರ 200 ಮೀಟರ್ ಓಟ ವಿಭಾಗದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಯಶವಂತ್ ಅವರು "ಏಷ್ಯನ್ ಗೇಮ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಆಯ್ಕೆ ಟ್ರಯಲ್ಸ್" 2026ರಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಾರೆ. ಭಾರತೀಯ ಅಥ್ಲೆಟಿಕ್ಸ್ ಸಂಸ್ಥೆಯ ಪ್ರಕಟಣೆಯಂತೆ ಈ ಆಯ್ಕೆ ಟ್ರಯಲ್ಸ್ ಸೆಪ್ಟೆಂಬರ್ 5ರಿಂದ 7ರವರೆಗೆ ಉತ್ತರ ಪ್ರದೇಶದ ಮಥುರಾದಲ್ಲಿ ನಡೆಯಲಾಗಿತ್ತು.

ಯಶವಂತ್ ಅವರ ಆಯ್ಕೆಯು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಕ್ರೀಡಾ ಕ್ಷೇತ್ರದಲ್ಲಿನ ಬೆಳವಣಿಗೆಗೆ ಮಹತ್ವದ ಹೆಜ್ಜೆಯಾಗಿದೆ. ರಾಷ್ಟ್ರೀಯ ಮಟ್ಟದ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸುವ ಅವಕಾಶ ದೊರೆತಿರುವುದು ವಿದ್ಯಾರ್ಥಿಯ ಪ್ರತಿಭೆಗೆ ದೊರೆತಿರುವ ದೊಡ್ಡ ಮಾನ್ಯತೆಯಾಗಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಮಟ್ಟದ ಕ್ರೀಡಾ ಸಾಧನೆಗೆ ಇದು ದಾರಿಯಾಗಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಪ್ರೋತ್ಸಾಹ ನೀಡುತ್ತಿರುವ ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಪ್ರಯತ್ನಗಳು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ನಾಯಕತ್ವ, ತಂಡಭಾವನೆ, ಶಿಸ್ತು ಹಾಗೂ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಮಿಥುನ್ ಅವರ ಚಿನ್ನದ ಪದಕ ಮತ್ತು ಯಶವಂತ್ ಅವರ ರಾಷ್ಟ್ರೀಯ ಆಯ್ಕೆ ಟ್ರಯಲ್ಸ್‌ಗೆ ಪ್ರವೇಶವು ಸಂಸ್ಥೆಯಲ್ಲಿ ಕ್ರೀಡಾ ಪ್ರತಿಭೆಗಳಿಗೆ ದೊರೆಯುತ್ತಿರುವ ಅವಕಾಶಗಳಿಗೆ ಉತ್ತಮ ಉದಾಹರಣೆಯಾಗಿದೆ.

ಈ ಮೂವರು ಕ್ರೀಡಾಪಟುಗಳ ಸಾಧನೆಗೆ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ವಿದ್ಯಾನಿಕೇತನ ಶಿಕ್ಷಣ ಸೊಸೈಟಿಯ ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದೆ. ಮಿಥುನ್ ಎಸ್. ಅವರು ಇದೇ ರೀತಿಯಲ್ಲಿ ಇನ್ನಷ್ಟು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಸಾಧನೆಗಳನ್ನು ಮಾಡುವಂತಾಗಲಿ ಮತ್ತು ಯಶವಂತ್ ಸಿ. ಅವರು ಮಥುರಾದಲ್ಲಿ ನಡೆಯಲಿರುವ ಆಯ್ಕೆ ಟ್ರಯಲ್ಸ್‌ನಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಮುಂದಿನ ಹಂತಕ್ಕೆ ಆಯ್ಕೆಯಾಗಲಿ ಎಂದರು.

ವಿದ್ಯಾನಿಕೇತನ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಪಿ.ಪಾರಸ್ ಮಲ್, ಕಾರ್ಯದರ್ಶಿ ಟಿ.ಎನ್. ಚನ್ನಬಸವಪ್ರಸಾದ್, ಶೈಕ್ಷಣಿಕ ಸಂಯೋಜಕಿ ಮಿಥಿಲಾ, ಪ್ರಾಂಶುಪಾಲರಾದ ಸುಷ್ಮಾ, ಮುಖ್ಯೋಪಾಧ್ಯಾಯ ರಾಜಲಕ್ಷ್ಮಿ ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಶುಭ ಹಾರೈಸಿದ್ದರು.

ಶ್ರೀದೇವಿ ಫಾರ್ಮಸಿ ಕಾಲೇಜಿನಲ್ಲಿ "ಶ್ರೀಸಂಸ್ಕೃತಿ" ವಾರ್ಷಿಕೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಶಿರಾರಸ್ತೆಯ ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ವತಿಯಿಂದ "ಶ್ರೀಸಂಸ್ಕೃತಿ–2026" ವಾರ್ಷಿಕೋತ್ಸವ ಸಮಾರಂಭವನ್ನು ಸೆ.9ರಂದು (ಇಂದು) ಬುಧವಾರ ಬೆಳಿಗ್ಗೆ 10.30ಕ್ಕೆ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್ ರವರು ಹಾಗೂ ಶ್ರೀದೇವಿ ಚಾರಿಟಬಲ್‌ನ ಟ್ರಸ್ಟಿಯಾದ ಶ್ರೀಮತಿ ಶಾಂತದುರ್ಗಾದೇವಿ ಹುಲಿನಾಯ್ಕರ್‌ರವರು ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಫ್ಯಾಕಲ್ಟಿ ಆಫ್ ಫಾರ್ಮಸಿಯ ಡೀನ್ ಡಾ.ಶಿವಕುಮಾರ್ ಸ್ವಾಮಿ ಹಾಗೂ ಚಿತ್ರದುರ್ಗದ ಎಸ್. ಜೆ.ಎಂ. ವಿಶ್ವವಿದ್ಯಾಲಯ ಕುಲಸಚಿವರಾದ ಡಾ.ಎಂ.ಎಸ್. ಗಣಾಚಾರಿರವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ಗೌರವ ಅತಿಥಿಗಳಾಗಿ ಶ್ರೀದೇವಿ ವೈದ್ಯಕೀಯ ನಿರ್ದೇಶಕ ಡಾ. ರಮಣ್ ಎಂ. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಹಾಗೂ ನೇತ್ರತಜ್ಞೆ ಡಾ.ಲಾವಣ್ಯ ಹಾಗೂ ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್‌ರವರು ಭಾಗವಹಿಸಲಿದ್ದಾರೆ. ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ನಿರ್ದೇಶಕರಾದ ಡಾ.ಬಿ.ಗೋಪಾಲಕೃಷ್ಣ, ಶ್ರೀದೇವಿ ಔಷಧ ವಿಜ್ಞಾನ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ಶಿವಕುಮಾರ್ ಹಾಗೂ ವಿದ್ಯಾರ್ಥಿ– ವಿದ್ಯಾರ್ಥಿನಿಯರು, ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಲಿದ್ದಾರೆ.

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದಿಂದ ಮಹಿಳಾ ವಸತಿ ನಿಲಯ ಸ್ಥಾಪನೆ

ತುಮಕೂರು; ಮಹಿಳಾ ವಸತಿ ನಿಲಯ ವನ್ನು ಬೆಂಗಳೂರಿನಲ್ಲಿ ಆರಂಭಿಸಲು ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆ ನಿರ್ಧರಿಸಿದೆ ಎಂಧು ಮಹಿಳಾ ಹಾಸ್ಟೆಲ್ ಯೋಜನಾ ಸಮಿತಿ ಗೌರವ ಅಧ್ಯಕ್ಷರಾಧ ಬಿ.ವಿ.ಕುಮಾರ್ ತಿಳಿಸಿದರು. ಗ್ರಾಮಂತರ ಪ್ರದೇಶದಿಂದ ಬೆಂಗಳೂರಿಗೆ ಬರುವ ವಿದ್ಯಾರ್ಥಿನಿಯರಿಗೆ ಮಹಿಳಾ ಹಾಸ್ಟೆಲ್, ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯ ಹಾಗೂ ನೆಲ ಮಹಡಿಯಲ್ಲಿ ವ್ಯಾಪಾರಿ ಮಳಿಗೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ ಎಂಧು ಅವರು ತಿಳಿಸಿದರು.ಈ ಕಾರ್ಯಕ್ಕೆ ಉಲುಚುಕಮ್ಮೆ ಸಮುದಾಯದ ಎಲ್ಲರ ಸಹಕಾರ ಕೋರುವುದಾಗಿ ಅವರು ತಿಳಿಸಿದರು.

ತುಮಕೂರಿನ ಶಂಕರಮಠದ ಶ್ರೀ ಅಭಿನವ ವಿದ್ಯಾತೀರ್ಥ ಪ್ರವಚನ ಮಂದಿರದಲ್ಲಿಶನಿವಾರ ನಡೆದ ತುಮಕೂರು ಜಿಲ್ಲಾ ಉಲುಚುಕಮ್ಮೆ ಬಾಂಧವರ ಸಮಾವೇಶದಲ್ಲಿ ಮಾತನಾಡುತ್ತಿದ್ದ ಅವರು ಸಾಮರಸ್ಯ ಇದ್ದರೆ ಮಾತ್ರ ಭಾಂಧವ್ಯ ಮೂಡುತ್ತದೆ, ಭಾಂಧ್ವ್ಯ ಇದ್ದರೆ ಮಾತ್ರ ಸಂಘಟನೆಆಗುತ್ತದೆ ಸಂಘಟನೆ ಆಧ ನಂತರ ಸಂಪ್ರದಯ ಉಳಿಯುತ್ತದೆ ಅದ್ದರಿಂದ ಸಾಮಾರಸ್ಯ ಭಾಂಧವ್ಯ ಸಂಘಟನೆ ದೃಷಿಯಲ್ಲಿ ಇಟ್ಟುಕೊಂಡು ಸಂಘಟನೆ ಬೆಳೆಸಲಾಗುತ್ತದೆಎಂದ ಅವರು ವಿಲ್ಸನ್ ಗಾರ್ಡನ್ ಸಲ್ಲಿರುವ ಉಲುಚುಕಮ್ಮೆ ಬ್ರಾಹ್ಮಣರ ಸಂಘದ ಸಮೀಪವೇ ಹೆಣ್ಣುಮಕ್ಕಳ ವಿದ್ಯಾರ್ಥಿ ನಿಲಯ ನಿರ್ಮಿಸಲಾಗುತ್ತಿದೆ ಎಂದರು. ತುಮಕೂರಿನಲ್ಲಿ ನಡೆದ ಕಾರ್ಯಕ್ರಮದ ಆತಿಥ್ಯವನ್ನು ಶ್ಲಾಘಿಸಿದ ಅವರು, ಸಮಾಜದ ಎಲ್ಲರ ಸಹಕಾರದೊಂದಿಗೆ ಮತ್ತಷ್ಟು ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳುವ ಅಗತ್ಯವಿದೆ ಎಂದರು.



ಸಮಾಜದ ಉನ್ನತಿಗಾಗಿ ಮಹಾಸಭಾ ವತಿಯಿಂದ ಜನಪರ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಬಾಂಧವರ ಸಮಾವೇಶಗಳನ್ನು ಆಯೋಜಿಸಿ, ಸಮಾಜದ ಹಿರಿಯರನ್ನು ಗೌರವಿಸುವ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ನೆರವು ನೀಡುವ ಕಾರ್ಯವನ್ನು ಮಹಾಸಭಾ ಮುಂದುವರಿಸಿಕೊಂಡು ಬರುತ್ತಿದೆ ಎಂದು ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಲಕ್ಷ್ಮೀನಾರಾಯಣರಾವ್ ತಿಳಿಸಿದರು. ಮೈಸೂರು, ಕೋಲಾರ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಸಮಾವೇಶಗಳನ್ನು ನಡೆಸಲಾಗಿದೆ ಎಂದರು.. ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗದ ಹಿರಿಯರ ಮನೆಗಳಿಗೆ ತೆರಳಿ ಸನ್ಮಾನಿಸುವ ಕಾರ್ಯವನ್ನೂ ಮಾಡಲಾಗಿದೆ. ಮುಂದಿನ ಬಾಂಧವರ ಸಮಾವೇಶ ಚಿಕ್ಕಬಳ್ಳಾಪುರದಲ್ಲಿ ನಡೆಯಲಿದೆ ಎಂದು ಅವರು ಹೇಳಿದರು.

ತುಮಕೂರಿನಲ್ಲಿ ಮಹಾಸಭೆಗೆ ಸ್ವಂತ ನಿವೇಶನ ಪಡೆಯುವ ಕನಸು ನನಸಾಗಿದ್ದು, ಕಟ್ಟಡ ನಿರ್ಮಾಣದ ಕಾರ್ಯವೂ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ಲಕ್ಷ್ಮೀನಾರಾಯಣರಾವ್ ತಿಳಿಸಿದರು.

ಸದಸ್ಯತ್ವಅಭಿಯಾನ, ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದು ಹಾಗೂ ಸಮಾಜದ ಹಿರಿಯರನ್ನು ಸನ್ಮಾನಿಸುವಂತಹ ಕಾರ್ಯಕ್ರಮಗಳು ಸಮಾಜಮುಖಿ ಕಾರ್ಯಗಳಿಗೆ ಮಾದರಿಯಾಗಿವೆ. ಸಮಾಜವನ್ನು ಉತ್ತಮ ದಾರಿಯಲ್ಲಿ ಕೊಂಡೊಯ್ಯಲು ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮಹಾಸಭಾ ರಾಜ್ಯ ಕಾರ್ಯದರ್ಶಿ ವೈ.ಜಿ. ಮುರುಳೀಧರ್ ಕರೆ ನೀಡಿದರು.

16 ವರ್ಷಗಳ ಸಮಾಜಮುಖಿ ಸೇವೆ: ಕಳೆದ 16 ವರ್ಷಗಳಿಂದ ತುಮಕೂರು ಜಿಲ್ಲಾ ಉಲುಚುಕಮ್ಮೆ ಬ್ರಾಹ್ಮಣ ಸಭಾ ವತಿಯಿಂದ ಸಮಾಜ ಸೇವೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಸಂಘದ ಸ್ವಂತ ನಿವೇಶನ ಹೊಂದುವ ಉದ್ದೇಶ ಇದೀಗ ಈಡೇರಿರುವುದು ಸಂತಸದ ಸಂಗತಿ ಎಂದು ಜಿಲ್ಲಾಗಕಾರ್ಯಧ್ಯಕ್ಷ ಆರ್. ವಾಸುದೇವಮೂರ್ತಿ ಹಾಗೂ ಜಿಲ್ಲಾ ಕಾರ್ಯದರ್ಶಿ ಮಠ ಮುದ್ರೆ ಶ್ರೀನಿವಾಸ್ ಜೋಯಿಶ್ ಹರ್ಷ ವ್ಯಕ್ತಪಡಿಸಿದರು.

ಉದಾರ ದಾನಿಗಳ ಸಹಕಾರದೊಂದಿಗೆ ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳನ್ನು ನಡೆಸಲಾಗುತ್ತಿದೆ. 2014ರಿಂದ ಜಗದ್ಗುರುಗಳ ಆಶೀರ್ವಾದದೊಂದಿಗೆ ಸಭೆಯ ಚಟುವಟಿಕೆಗಳು ನಡೆಯುತ್ತಿದ್ದು, ಬೆಂಗಳೂರಿನ ಸಭೆಯೊಂದಿಗೆ ತಾಯಿ–ಮಕ್ಕಳ ಬಾಂಧವ್ಯದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದಾಗಿ ಅವರು ತಿಳಿಸಿದರು.

ತುಮಕೂರು ಉಲುಚುಕಮ್ಮೆ ಬಾಂಧವರ ಸಮಾವೇಶದಲ್ಲಿ ಉಲುಚುಕಮ್ಮೆ ಸಮುದಾಯದ ಹದಿನೈದು ಮಂದಿ ಆರ್ಥಿಕವಾಗಿ ಹಿಂದುಳಿದ ವಿಜಾರ್ಥಿಗಳಿಗೆ ಆರ್ಥಿಕ ಸಹಾಧನವನ್ನು ನೀಡಲಾಯಿತು ಹಾಗು ಉಲುಚುಕಮ್ಮೆ ಸಮುದಾಯದ ಇಪ್ಪತ್ತು ಹಿರಿಯ ದಂಪತಿಗಳನ್ನು ಗೌರವಿಸಲಾಯಿತು, ಶಿಕ್ಷಕರ ದಿನಾಚರಣೆಯ ಅಂಗವಾಗಿ ನಿವೃತ್ತ ಉಪನ್ಯಾಸಕರಾದ ಹೆಚ್.ಸುಬ್ಬರಾವ್ ಅವರನ್ನು ಗೌರವಿಸಲಾಯಿತು.

SP NEWS

ಹೆಚ್‌ಡಿಕೆ, ಎ.ಮಂಜುನಾಥ್ ವಿರುದ್ಧ ಟೀಕೆ ಮಾಡುವುದೇ ಎಚ್‌ಸಿಬಿ ಕಾಯಕ ಜೆಡಿಎಸ್ ಮುಖಂಡರ ಕಿಡಿ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ: ಬಾಲಕೃಷ್ಣ ಅವರು 5ನೇ ಬಾರಿಗೆ ಶಾಸಕರಾಗಿ ಮೂರೂವರೆ ವರ್ಷಗಳೇ ಕಳೆದಿವೆ. ಇದುವರೆಗಿನ ಸಾಧನೆ ಏನೆಂಬುದನ್ನು ಅವರೇ ಬಹಿರಂಗಪಡಿಸಲಿ. ಹೆಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧವೋ, ಎ.ಮಂಜುನಾಥ್ ಅವರ ವಿರುದ್ಧವೋ ವೈಯಕ್ತಿಕ ಟೀಕೆಗಳನ್ನು ಮಾಡುತ್ತಾ ಕಾಲಹರಣ ಮಾಡುವ ಬದಲು ಇರುವ ಅಧಿಕಾರವನ್ನು ಬಳಸಿಕೊಂಡು ಕ್ಷೇತ್ರದ ಅಭಿವೃದ್ಧಿ ಕಡೆಗೆ ಗಮನ ಹರಿಸಿ ಎಂದು ಬಿಡದಿ ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ ದೇವರಾಜು ತಿಳಿಸಿದರು.

ಬಿಡದಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಮುಖಂಡರು ವೈಯಕ್ತಿಕ ಟೀಕೆ, ಸುಳ್ಳು ಆರೋಪಗಳ ಮೂಲಕ ತೇಜೋವಧೆ ಮಾಡುವುದನ್ನು ಬಿಟ್ಟು ಅಭಿವೃದ್ಧಿಯತ್ತ ಗಮನ ಹರಿಸಲಿ ಎಂದು ಸಲಹೆ ನೀಡಿದರು.

ಮತದಾರರು ಪಾಠ ಕಲಿಸಲಿದ್ದಾರೆ: ಮತದಾರರು ನಿಮ್ಮನ್ನು ಆಯ್ಕೆ ಮಾಡಿರುವುದು ಕ್ಷೇತ್ರದ ಅಭಿವೃದ್ಧಿ ಮಾಡಲಿ ಎಂದು. ಜನರ ಕಷ್ಟ–ಸುಖಗಳಿಗೆ ಸ್ಪಂದಿಸಲಿ ಎಂದು. ಆದರೆ, ನೀವುಗಳು ಜನಸೇವೆಯನ್ನು ಮರೆತು ಬೇರೆಯವರ ವಿರುದ್ಧ ಟೀಕೆ, ಆರೋಪ ಮಾಡುವುದನ್ನೇ ಕಾಯಕವಾಗಿಸಿಕೊಂಡರೆ ಜನ ನಿಮಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಎಚ್ಚರಿಸಿದರು.

ಟೀಕೆ ಮಾಡುವುದೇ ಎಚ್ ಸಿಬಿ ಕಾಯಕ: ಎಚ್.ಸಿ.ಬಾಲಕೃಷ್ಣ ಅವರು 5ನೇ ಬಾರಿಗೆ ಶಾಸಕರಾಗಿದ್ದಾರೆ. ಇದೀಗ ಸಚಿವರೂ ಆಗಿದ್ದಾರೆ. ಪಕ್ಷ ಬೇಧ ಮರೆತು ನಾವು ಅವರಿಗೆ ಅಭಿನಂದನೆ ಸಲ್ಲಿಸಿದ್ದೇವೆ. ಏಕೆಂದರೆ ಬಿಡದಿ ಭಾಗದ ಅಭಿವೃದ್ಧಿ ಆಗಬಹುದೆಂಬ ನಿರೀಕ್ಷೆ ಹೊಂದಿದ್ದೇವೆ. ಆದರೆ, ಅವರು ಅಭಿವೃದ್ಧಿ ಕಡೆಗೆ ಗಮನ ನೀಡುವ ಬದಲು ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ, ಎ.ಮಂಜುನಾಥ್ ಸೇರಿದಂತೆ ಜೆಡಿಎಸ್ ಮುಖಂಡರು, ಕಾರ್ಯಕರ್ತರ ವಿರುದ್ಧ ಟೀಕೆ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನ ಸ್ಥಳೀಯ ಮುಖಂಡರು ಎಚ್.ಸಿ.ಬಾಲಕೃಷ್ಣ ಅವರ ತಲೆಗೆ ಇಲ್ಲಸಲ್ಲದ್ದನ್ನೆಲ್ಲಾ ತುಂಬಿ ಅವರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಆ ಮೂಲಕ ಬಾಲಕೃಷ್ಣ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ.



ಅದನ್ನು ಬಿಟ್ಟು ಸ್ಥಳೀಯ ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತಂದು ಅದನ್ನು ಬಗೆಹರಿಸುವ ಕೆಲಸ ಮಾಡಿದರೆ ಜನ ನಿಮಗೆ ಮತ ನೀಡಿದ್ದಕ್ಕೆ ಸಾರ್ಥಕವಾಗುತ್ತದೆ ಎಂದರು.

ಎ.ಮಂಜುನಾಥ್ ಕೊಡುಗೆ ಸಾಕಷ್ಟಿದೆ : ಬಿಡದಿ ಭಾಗಕ್ಕೆ ಎ.ಮಂಜುನಾಥ್ ಅವರ ಕೊಡುಗೆ ಬಹಳಷ್ಟಿದೆ. ಅವರು ಶಾಸಕರಾಗಿದ್ದಾಗ ಬಿಡದಿ ಪುರಸಭೆ ವ್ಯಾಪ್ತಿಯಲ್ಲಿ ಯುಜಿಡಿ ಕಾಮಗಾರಿಗೆ ಚಾಲನೆ ನೀಡಿದ್ದರು. ಆದರೆ, ಅದು ಇದುವರೆಗೂ ಪೂರ್ಣಗೊಂಡಿಲ್ಲ. ಕಾಮಗಾರಿ ಏಕೆ ಸ್ಥಗಿತಗೊಂಡಿದೆ. ಸಚಿವರಾಗಿರುವ ನೀವು ಏಕೆ ಮುಂದುವರೆಸುತ್ತಿಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನವರಿಗೆ ರಾಜಕಾರಣವೇ ಮುಖ್ಯ : ಇಡೀ ಪಟ್ಟಣಕ್ಕೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರಸ್ತೆ ಇಲ್ಲ, ಮೂಲ ಸೌಕರ್ಯ ಅಭಿವೃದ್ಧಿಗೆ ಅನುದಾನದ ಕೊರತೆ ಇದೆ. ನಿಮ್ಮದೇ ಸರ್ಕಾರ ಇದೆ. ಜಿಲ್ಲೆಯವರೇ ಆದ ಡಿ.ಕೆ.ಶಿವಕುಮಾರ್ ಅವರು ಸಿಎಂ ಆಗಿದ್ದಾರೆ. ವಿಶೇಷ ಅನುದಾನ ತಂದು ಬಿಡದಿ ಪಟ್ಟಣದ ಅಭಿವೃದ್ಧಿ ಮಾಡಬಹುದಿತ್ತು. ಆದರೆ, ನಿಮಗೆ ರಾಜಕಾರಣವೇ ಮುಖ್ಯವಾಗಿದೆ. ಅಭಿವೃದ್ಧಿಯನ್ನು ನಿರ್ಲಕ್ಷ್ಯ ಮಾಡಿದ್ದೀರಿ ಎಂದು ಕಿಡಿ ಕಾರಿದರು.

ಬೈರಮಂಗಲ ಎಡದಂಡೆ, ಬಲದಂಡೆ ಕಾಲುವೆಗಳ ನವೀಕರಣ ಯಾರು ಮಾಡಿದ್ದು, ಬಿಡದಿ ಮುಖ್ಯರಸ್ತೆ ಅಭಿವೃದ್ಧಿ ಮಾಡಿರುವುದು ಕುಮಾರಸ್ವಾಮಿ ಅವರು ನೀಡಿದ್ದ ವಿಶೇಷ ಅನುದಾನದಿಂದ. ಅವರು ನೀಡಿದ್ದ ಹತ್ತು ಕೋಟಿ ಅನುದಾನದಿಂದ ಮಾಡಿದ್ದ ಎಸ್ಟಿಮೇಟ್ ಅನ್ನು ಬದಲಿ ಕಾಮಗಾರಿ ಮಾಡಿ ಮತ್ತೊಂದು ವಾರ್ಡ್‌ಗೆ ಏಕೆ ಕೊಂಡೊಯ್ದಿರಿ ಎಂದು ಪ್ರಶ್ನಿಸಿದ ದೇವರಾಜು, ಇದು ದ್ವೇಷದ ರಾಜಕಾರಣ ಅಲ್ಲವಾ ಎಂದರು.

ಡಿ.ಕೆ.ಶಿವಕುಮಾರ್ ಅವರ ಗಮನವನ್ನು ಸೆಳೆಯಲು, ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ಪಡೆಯಲು, ಇಲ್ಲವೇ ತಮ್ಮ ವೈಯಕ್ತಿಕ ಬೇಳೆ ಬೇಯಿಸಿಕೊಳ್ಳಲು ಕೆಲವರು ನಮ್ಮ ನಾಯಕರ ವಿರುದ್ಧ ಟೀಕೆ ಮಾಡುತ್ತಿರಬಹುದು ಎಂಬುದು ನಮ್ಮ ಭಾವನೆ ಎಂದು ಹೇಳಿದರು.

ಕಾಂಗ್ರೆಸ್‌ನದ್ದು ಗೂಂಡಾ ಸಂಸ್ಕೃತಿ : ಕೃಷಿ ಸಮಾಜದ ಜಿಲ್ಲಾಧ್ಯಕ್ಷ ಗೋಪಾಲ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಗೂಂಡಾಗಿರಿ ಹೆಚ್ಚಾಗುತ್ತದೆ. ಬಡಬಗ್ಗರ ವಿರುದ್ಧ ದೌರ್ಜನ್ಯ ಎಸಗುತ್ತಾರೆ. ಭ್ರಷ್ಟಾಚಾರ, ಲೂಟಿ ಮಿತಿ ಮೀರುತ್ತದೆ. ಮಹಿಳೆಯರ ವಿರುದ್ಧ ಕೀಳು ಮಟ್ಟದ ಪದ ಬಳಸಿ ರಾಜಕಾರಣ ಮಾಡುತ್ತಾರೆ. ಇದು ಕಾಂಗ್ರೆಸ್ ಸಂಸ್ಕೃತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ಸಿಗರ ಪಾಪದ ಕೊಡ ತುಂಬುತ್ತಾ ಬಂದಿದೆ. ಅವರು ಮಾಡುತ್ತಿರುವ ಪಾಪದ ಕಾರ್ಯಗಳಿಗೆ 2028ಕ್ಕೆ ಪ್ರಾಯಶ್ಚಿತ್ತ ಆಗುತ್ತದೆ. ಜನ ನೀಡಿರುವ ಅಧಿಕಾರವನ್ನು ಬಳಸಿಕೊಂಡು ಅಭಿವೃದ್ಧಿ ಕೆಲಸ ಮಾಡುವುದನ್ನು ಬಿಟ್ಟು ಜನರನ್ನು ಲೂಟಿ ಹೊಡೆಯಲು ನಿಂತಿದ್ದಾರೆ. ಸೂರ್ಯ, ಚಂದ್ರ ಇರುವುದು ಎಷ್ಟು ಸತ್ಯವೋ 2028ರ ಚುನಾವಣೆಯಲ್ಲಿ ಎ.ಮಂಜುನಾಥ್ ಅವರು ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗುವುದು ಅಷ್ಟೇ ಸತ್ಯ ಎಂದು ಭವಿಷ್ಯ ನುಡಿದರು.


ಚಂದ್ರಶೇಖರ್ ಸೋಲಿಗೆ ಪಿ.ನಾಗರಾಜು ಕಾರಣ : ಬಿಡದಿ ಪುರಸಭೆ ಮಾಜಿ ಸದಸ್ಯ ಕುಮಾರ್ ಮಾತನಾಡಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಚಂದ್ರಶೇಖರ್ ಅವರ ಸೋಲಿಗೆ ಬಮುಲ್ ನಿರ್ದೇಶಕ ಪಿ.ನಾಗರಾಜು ಕಾರಣರೇ ಹೊರತು ಎ.ಮಂಜುನಾಥ್ ಅಲ್ಲ ಎಂದು ಸ್ಪಷ್ಟಪಡಿಸಿದರು.

ನಿಲ್ಲಲು ನಿರಾಕರಿಸಿದ್ದ ಕೆಂಪಣ್ಣ ಅವರ ಮನವೊಲಿಸಿ ಅಭ್ಯರ್ಥಿಯನ್ನಾಗಿ ಮಾಡಿದ್ದೇ ಪಿ.ನಾಗರಾಜು. ಕೆಂಪಣ್ಣ ಸ್ಪರ್ಧೆಯಿಂದ ಚಂದ್ರಶೇಖರ್ ಅವರಿಗೆ ಹಿನ್ನಡೆಯಾಗಿ ಆ ಚುನಾವಣೆ ಸೋತಿದ್ದರು. ಆದರೆ, ಇದೀಗ ಚಂದ್ರಶೇಖರ್ ಅವರು ತಮ್ಮ ಸೋಲಿಗೆ ಎ.ಮಂಜು ಅವರೇ ಕಾರಣ ಎಂದು ದೂರುತ್ತಿರುವುದು ಹಾಸ್ಯಾಸ್ಪದ ಎಂದರು.


ಮಾಜಿ ಶಾಸಕ ಎ.ಮಂಜುನಾಥ್ ಮನೆ ಮುಂದಿನ ರಸ್ತೆ ಸೇರಿದಂತೆ ಹಲವು ರಸ್ತೆಗಳ ಅಭಿವೃದ್ಧಿ ಕಾಮಗಾರಿ ನಡೆದದ್ದು ಹೆಚ್‌ಡಿಕೆ ನೀಡಿದ್ದ ಗ್ರ್ಯಾಂಟ್ ಹಣದಲ್ಲಿ ಹೊರತು ಕಾಂಗ್ರೆಸ್ ಸರ್ಕಾರದ ಕೊಡುಗೆ ಏನಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರ, ಇಲ್ಲವೇ ಮುಖ್ಯಮಂತ್ರಿಗಳು ತಪ್ಪು ಹೆಜ್ಜೆ ಇಟ್ಟಾಗ ಅದನ್ನು ಪ್ರಶ್ನಿಸುವುದು, ಟೀಕಿಸುವುದು, ಆರೋಪ ಮಾಡುವುದು ವಿರೋಧ ಪಕ್ಷಗಳ ಕರ್ತವ್ಯ ಆಗಿರುತ್ತದೆ. ಅದರಂತೆ ಹಲವು ವಿಚಾರಗಳಲ್ಲಿ ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರು, ಸಿಎಂ ಸೇರಿದಂತೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಟೀಕೆಗಳನ್ನು ಮಾಡಿದ್ದಾರೆ ಎಂದರು.

ಆಳುವವರು ಟೀಕೆ ಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕು. ತಮ್ಮ ತಪ್ಪುಗಳನ್ನು ಒಪ್ಪಿಕೊಂಡು, ತಿದ್ದಿಕೊಂಡು ಮುನ್ನಡೆಯಬೇಕು. ಅದನ್ನು ಬಿಟ್ಟು ಸಚಿವ ಎಚ್.ಸಿ.ಬಾಲಕೃಷ್ಣ ಅವರು ವೈಯಕ್ತಿಕ ಟೀಕೆ ಮಾಡಲು ಆರಂಭಿಸಿದರು. ಎ. ಮಂಜುನಾಥ್ ಅವರು ಅವರದೇ ಧಾಟಿಯಲ್ಲಿ ಉತ್ತರ ನೀಡಿದರು. ಜಿಬಿಡಿಎ ಅಧ್ಯಕ್ಷ ಗಾಣಕಲ್ ನಟರಾಜು ಈ ಸರಣಿಯನ್ನು ಮುಂದುವರಿಸಿದರು. ಇದನ್ನು ಆರಂಭಿಸಿದ್ದೇ ಕಾಂಗ್ರೆಸ್ ಮುಖಂಡರು. ಇದಕ್ಕೆ ಅವರೇ ಅಂತ್ಯವಾಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಪುರಸಭಾ ಸದಸ್ಯರಾದ ಹರಿಪ್ರಸಾದ್, ರಾಕೇಶ್, ರಮೇಶ್, ಮಾಜಿ ಪುರಸಭಾ ಸದಸ್ಯರಾದ ಕುಮಾರ್, ರಾಜಣ್ಣ, ಮುಖಂಡರಾದ ಖಲೀಲ್, ಮುನಿತಿಮ್ಮಯ್ಯ, ಇಟ್ಟಮಡು ಗೋಪಾಲ್, ಬಸವರಾಜು, ರಾಮನಹಳ್ಳಿ ರವೀಶ್, ಸಂಪತ್, ಧನಂಜಯ, ಗುರುಮೂರ್ತಿ, ಮಂಜುನಾಥ್, ನಾಗೇಂದ್ರ, ಪಾಪಣ್ಣ, ಚಂದ್ರಶೇಖರ್, ಗಿರಿಧರ್, ನಿತ್ಯಾನಂದ, ತಿಮ್ಮೇಗೌಡ, ಹೆಜ್ಜಾಲ ರವಿ, ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.



ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಂ. ಎನ್. ಆನಂದ್ ಸ್ವಾಮಿಯವರ ಜನ್ಮ ದಿನವನ್ನು ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಮಂಗಳವಾರ, ಬಿಜೆಪಿ ಪಕ್ಷದ ಪದಾಧಿಕಾರಿಗಳು, ಕಾರ್ಯಕರ್ತರು ಮತ್ತು ಮುಖಂಡರುಗಳು ಆಚರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಎಸ್ ಸಿ ಮೋರ್ಚಾ ಅಧ್ಯಕ್ಷ ಕಾಳಯ್ಯ, ಕಾರ್ಯಾಲಯ ಕಾರ್ಯದರ್ಶಿ ಚೆನ್ನಪ್ಪ, ಜಿಲ್ಲಾ ಎಸ್ ಸಿ ಮೋರ್ಚಾ ಉಪಾಧ್ಯಕ್ಷ ವಿ. ತೇಜು, ಮುಖಂಡರುಗಳಾದ ಸಿಂಗ್ರಯ್ಯ, ನಂದೀಶ, ಸಿದ್ದರಾಜು, ಚಂದನ್ ಮೊರೆ ಮುಂತಾದವರಿದ್ದರು.



ಚುನಾವಣೆಗೆ

ತೆಂಗಿನಕಲ್ಲು ಅರಣ್ಯದಿಂದ ಹಂದಿಗೊಂದಿ ಅರಣ್ಯಕ್ಕೆ ಹೋಗುವ ಆನೆಗಳಿಂದ ದಾಳಿ

ರೈತರ ಫಸಲು, ಮಾವು, ತೆಂಗಿನ ಮರ, ನೀರಾವರಿ ಪೈಪ್‌ಗಳು ನಾಶ: ಪರಿಹಾರಕ್ಕೆ ರೈತರ ಒತ್ತಾಯ

ರಾಮನಗರ : ಮೂರು ಆನೆಗಳ ಹಿಂಡು ಹೋಬಳಿಯ ಗುನ್ನೂರು ಗ್ರಾಮದಲ್ಲಿ ದಾಂಧಲೆ ನಡೆಸಿ ರೈತರ ಫಸಲು, ಮಾವು, ತೆಂಗಿನಮರ, ನೀರಾವರಿ ಪೈಪ್‌ಗಳನ್ನು ನಾಶ ಪಡಿಸಿ ಹೋಗಿವೆ. ಭಾನುವಾರ ರಾತ್ರಿ ದಾಳಿ ನಡೆಸಿರುವ ಆನೆಗಳು ಗುನ್ನೂರು ಗ್ರಾಮದ ಮಂಟೇದಯ್ಯ, ರಾಮಸ್ವಾಮಯ್ಯ, ರಾಮಶೆಟ್ಟಿ, ದೇವೇಗೌಡ, ಮಧು, ಕೃಷ್ಣಶೆಟ್ಟಿ ಎಂಬ ರೈತರ ತೆಂಗು, ಮಾವಿನಮರಗಳು, ನೀರಾವರಿ ಪರಿಕರ ಮತ್ತಿತರ ಫಸಲು ನಾಶಪಡಿಸಿ ಎಲ್ಲೆಂದರಲ್ಲಿ ತುಳಿದು ನಾಶಪಡಿಸಿವೆ.

ಬೆಳೆ ನಾಶದ ಬಗ್ಗೆ ರೈತರು ಅರಣ್ಯಾಧಿಕಾರಿಗಳಿಗೆ ತಿಳಿಸಿ ಫಸಲು ನಷ್ಟದ ಬಗ್ಗೆ ಇಲಾಖೆಗೆ ದೂರು ನೀಡಿ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ. ಆನೆಗಳು ತೆಂಗಿನಕಲ್ಲು ಅರಣ್ಯದಿಂದ ಹಂದಿಗೊಂದಿ ಅರಣ್ಯಕ್ಕೆ ಲಗ್ಗೆ ಹಿಡುತ್ತಿವೆ. ಅರಣ್ಯ ಇಲಾಖೆ ಅಧಿಕಾರಿಗಳು ಆನೆಗಳನ್ನು ತಡೆಗಟ್ಟುತ್ತಿಲ್ಲ ಇದರಿಂದ ಆನೆಗಳ ಬಾಯಿಗೆ ನಾವು ಕಷ್ಟಪಟ್ಟು ವರ್ಷಾನುಗಟ್ಟಲೆ ಬೆಳೆಸಿದ ಮರಗಿಡ ನಾಶವಾಗುತ್ತಿವೆ.

ಅರಣ್ಯ ಸೇರುವಾಗ ಮತ್ತು ವಾಪಸ್ ಹೋಗುವಾಗ ನಮ್ಮ ಮತ್ತು ನಮ್ಮ ಗ್ರಾಮದ ರೈತರ ಫಸಲು ಮತ್ತು ಬೋರ್‌ವೆಲ್ ಪರಿಕರಗಳನ್ನು ನಾಶಪಡಿಸಿ



ಹೋಗುತ್ತಿವೆ. ಇದರಿಂದ ರೈತರು ಆರ್ಥಿಕ ನಷ್ಟ ಹೊಂದುವಂತಾಗಿದೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೆ ಯಾವ ಪ್ರಯೋಜನವೂ ಆಗುತ್ತಿಲ್ಲ. ಸ್ಥಳಕ್ಕೆ ಬಂದು ರೈತರ ಕಷ್ಟ ಕೇಳುತ್ತಿಲ್ಲ ಕೇವಲ ಹಾರಿಕೆ ಉತ್ತರ ಹೇಳುತ್ತಾರೆ. ಈಗಾಗಲೇ ಕಳೆದ ವರ್ಷ ಆಗಿರುವ ಬೆಳೆ ನಷ್ಟ ಪರಿಹಾರ ಕೂಡ ನೀಡಿಲ್ಲ. ಬೆಳೆ ನಷ್ಟದ ವೈಜ್ಞಾನಿಕ ಪರಿಹಾರ ಕೂಡ ನೀಡುತ್ತಿಲ್ಲ. ಕೂಡಲೇ ಅರಣ್ಯ ಇಲಾಖೆ ಆನೆಗಳನ್ನು ಅವುಗಳ ಮೂಲಸ್ಥಾನಕ್ಕೆ ಸೇರಿಸುವ ಕೆಲಸ ಮಾಡಬೇಕಿದೆ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದು ರೈತರ ಫಸಲು ನಷ್ಟದ ವೈಜ್ಞಾನಿಕ ಪರಿಹಾರ ನೀಡಲು ಕ್ರಮ ಕೈಗೊಳ್ಳಬೇಕು ಹಂದಿಗೊಂದಿ ಅರಣ್ಯದ ಆನೆಗಳನ್ನು ಮೂಲ ಸ್ಥಾನಕ್ಕೆ ಓಡಿಸಬೇಕು ಎನ್ನುತ್ತಾರೆ ರೈತರು.

ಆನೆಗಳನ್ನು ತಡೆಗಟ್ಟುತ್ತೇವೆ ಎಂಬ ಅರಣ್ಯ ಇಲಾಖೆ ಅಧಿಕಾರಿಗಳ ಹೇಳಿಕೆ ಹುಸಿಯಾಗಿದೆ. ಮೇಲಧಿಕಾರಿಗಳೂ ಕೂಡಲೇ ನಮ್ಮ ಕಷ್ಟ ಕೇಳಬೇಕು ಇಲ್ಲದಿದ್ದರೆ ಬಡ ರೈತರಾದ ನಮಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಆನೆ ನಾಶ ಮಾಡಿದ ಮರಮುಟ್ಟು ಫಸಲು, ಪರಿಕರ ತಂದು ನಾವುಗಳು ಅರಣ್ಯ ಇಲಾಖೆ ಕಛೇರಿ ಮುಂದೆ ಪ್ರತಿಭಟನೆ ನಡೆಸಬೇಕಾಗುತ್ತದೆ.

ಮಂಟೇದಯ್ಯ, ರೈತ, ಗುನ್ನೂರು.

: ಹಂದಿಗೊಂದಿ ಅರಣ್ಯಕ್ಕೆ ಕಳೆದ ಮೂರು ದಿನಗಳ ಹಿಂದೆ ಎರಡು, ಭಾನುವಾರ ರಾತ್ರಿ ಮೂರು ಆನೆಗಳು ಬಂದಿವೆ. ತೆಂಗಿನಕಲ್ಲು ಅರಣ್ಯದಿಂದ ಬರುವ ಸಮಯದಲ್ಲಿ ಗುನ್ನೂರು ಗ್ರಾಮದ ರೈತರ ಫಸಲು ನಾಶ ಮಾಡಿ ಅರಣ್ಯ ಸೇರಿವೆ. ಈಗಾಗಲೇ ಅವುಗಳ ಇರುವಿಕೆಯನ್ನು ಗುರ್ತಿಸಿದ್ದು ಇಂದು ರಾತ್ರಿಯೇ ಅವುಗಳ ಕಾರ್ಯಾಚರಣೆ ಮಾಡಲಾಗುತ್ತದೆ. ರೈತರ ಫಸಲು ನಷ್ಟಕ್ಕೆ ಇಲಾಖೆ ವೈಜ್ಞಾನಿಕ ಪರಿಹಾರ ನೀಡಲಿದೆ.

ಮಹಮ್ಮದ್ ಮನ್ಸೂರ್, ವಲಯ ಅರಣ್ಯಾಧಿಕಾರಿ, ರಾಮನಗರ.

ಗೌರಿ ಗಣೇಶ ಹಬ್ಬದ ಹಿನ್ನೆಲೆ ಆಯೋಜಕರು ಮತ್ತು ಶಾಂತಿ ಸುವ್ಯವಸ್ಥೆ ಸಭೆ

ಸೂರ್ಯಪ್ರಗತಿನ್ಯೂಸ್.ಕಾಂ

ಚಾಮರಾಜನಗರ ಜಿಲ್ಲಾ ಪೊಲೀಸ್ ಕೊಳ್ಳೇಗಾಲ ಉಪವಿಭಾಗ ಪಟ್ಟಣ ಪೊಲೀಸ್ ಠಾಣೆ, ಹಾಗೂ ಗ್ರಾಮಾಂತರ ಪೊಲೀಸ್ ಠಾಣೆ ಕೊಳ್ಳೇಗಾಲ ಇವರ ವತಿಯಿಂದ ಗೌರಿ ಗಣೇಶ ಹಬ್ಬದ ಹಿನ್ನೆಲೆ ಆಯೋಜಕರು ಮತ್ತು ಶಾಂತಿ ಸುವ್ಯವಸ್ಥೆ ಸಭೆಯನ್ನು ಪಟ್ಟಣದ ವಾಸವಿ ಮಹಲ್ ನಲ್ಲಿ ಆಯೋಜಿಸಲಾಗಿತ್ತು.

ಚಾಮರಾಜನಗರ ಜಿಲ್ಲಾ ಎಸ್ಪಿ ಮುತ್ತುರಾಜ್ ರವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತಾಲ್ಲೂಕಿನ ಎಲ್ಲ ಗ್ರಾಮಗಳ ಗಣೇಶ ಹಬ್ಬ ಆಯೋಜಕರುಗಳು ಮುಖಂಡರುಗಳ ಪಾಲ್ಗೊಂಡಿದ್ದು ಹಬ್ಬ ಆಚರಣೆಯ ಕುರಿತು ಸಲಹೆ ಸೂಚನೆಗಳನ್ನು ನೀಡಿದರು .

ಮುತ್ತುರಾಜ್ ರವರು ಮಾತನಾಡಿ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಶಾಂತಿ ಸಭೆ ನಡೆಸುವ ಅವಶ್ಯಕತೆ ಇಲ್ಲ ಯಾಕೆಂದರೆ ಕೊಳ್ಳೇಗಾಲದಲ್ಲಿ ಯಾವುದೇ ಹಬ್ಬದ ಸಂದರ್ಭದಲ್ಲಿ ಅಶಾಂತಿ ಉಂಟಾಗುವ ರೀತಿ ಯಾವುದೇ ಘಟನೆಗಳು ನಡೆದಿರುವುದಿಲ್ಲ , ಆದ್ದರಿಂದ ಕೊಳ್ಳೇಗಾಲ ಜನತೆ ಸರ್ವಧರ್ಮದ ಜನರು ಅನ್ಯೋನ್ಯತೆಯಿಂದ ಎಲ್ಲರೂ ಒಟ್ಟಾಗಿ ಸೇರಿ ಹಬ್ಬಗಳನ್ನು ಆಚರಿಸಿಕೊಂಡು ಹೋಗುತ್ತಾರೆ, ಗಣೇಶ ಹಬ್ಬ , ಅಂಬೇಡ್ಕರ್ ಜಯಂತಿ ,ಬಸವ ಜಯಂತಿ ಆಗುಬಹುದು ಯಾವುದೇ ಕಾರ್ಯಕ್ರಮಗಳನ್ನು ತುಂಬ ಅಚ್ಚುಕಟ್ಟಾಗಿ ಶಾಂತಿಯುತವಾಗಿ ಮಾಡುವುದು ಖುಷಿ, ಆಗಾಗಿ



ಸಂವಿಧಾನದಲ್ಲಿ ಎಲ್ಲ ಧರ್ಮದ ಎಲ್ಲ ಹಬ್ಬ ಆಚರಣೆ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಅವಕಾಶ ಇದೆ , ಆದರೆ ಹಬ್ಬ ಆಚರಣೆ ಇನ್ನಿತರ ಧರ್ಮೀಯರಿಗೆ ಜನರಿಗೆ ತೊಂದರೆ ಆಗದಂತೆ ಹಬ್ಬಗಳನ್ನು ಆಚರಣೆ ಮಾಡಬೇಕು ಯಾಕೆಂದರೆ ಮತ್ತೊಬ್ಬರಿಗೆ. ತೊಂದರೆ ಆಗುವಂತೆ ಮಾಡಿದರೆ ಅದು ಹಬ್ಬ ಆಗುವುದಿಲ್ಲ, ಆದ್ದರಿಂದ ಗಣೇಶ ಕೂರಿಸುವವರು ವ್ಯವಸ್ಥಿತವಾಗಿ ಯಾರಿಗೂ ತೊಂದರೆಯಾಗದಂತೆ ಅಥವಾ ವಾಹನಗಳು ಓಡಾಡಲು ತೊಂದರೆಯಾಗದಂತೆ ಸೂಕ್ತ ಸ್ಥಳದಲಿ ಗಣೇಶ ಮೂರ್ತಿ ಕೂರಿಸಿ ಜೊತೆಗೆ ಗಣೇಶ ಮೂರ್ತಿ ಕೂರಿಸುವ ಜಾಗದಲ್ಲಿ ಕಿರಿ ಕಿರಿ ಸೌಂಡ್ ಬಾರದಂತೆ ನೋಡಿಕೊಳ್ಳಿ ಡಿಜಿ ಸೌಂಡ್ ಬಳಸಲು ಅವಕಾಶ ಇರುವುದಿಲ್ಲ, ಅದರ ಬದಲು ಸಂಪ್ರದಾಯಿಕ ಕಲೆಗಳಿಗೆ ಆದ್ಯತೆ ಕೊಟ್ಟು ವಾದ್ಯಮೇಳ, ಜನಪದ ಕುಣಿತ ಡೊಳ್ಳು ಕುಣಿತ ಕಲೆಗಳನ್ನು ಮಾಡಿಸಿ ಅವರಿಗೆ ಜೀವನೋಪಾಯಕ್ಕೆ ದಾರಿಯಾಗುತ್ತದೆ

ಗಣೇಶ ಕೂರಿಸುವ ಸ್ಥಳದಲ್ಲಿ ನಮ್ಮ ಸಿಬ್ಬಂದಿಗಳನ್ನು ಒಬ್ಬರನ್ನು ನಿಯೋಜಿಸಲಾಗುವುದು,

ಗಣೇಶ ವಿಸರ್ಜನೆ ದಿನ ತುಂಬ ಜಾಗರೂಕರಾಗಿ ನಿಗದಿತ ಸ್ಥಳಗಳಲ್ಲಿ ವಿಸರ್ಜನೆ ಮಾಡಿ ಆ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳು ಇರುತ್ತಾರೆ ಅವರ ಸಲಹೆಯಂತೆ ಗಣೇಶ ವಿಸರ್ಜನೆ ಮಾಡಿ ,

ಹಬ್ಬದಲ್ಲಿ ಪ್ಲೇಕ್ ಬ್ಯಾನರ್ ಗಳ ಹಾಕಲು ಅವಕಾಶ ಇರುವುದಿಲ್ಲ, ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ತಪ್ಪು ಸಂದೇಶಗಳಿಗೆ ಆದ್ಯತೆ ಕೊಡಬೇಡಿ, ಯಾಕೆಂದರೆ ಕೆಲವು ಕಿಡಿಗೇಡಿಗಳು ಸುಳ್ಳು ಸುಳ್ಳು ಮಾಹಿತಿಗಳನ್ನು ಹರಿಬಿಟ್ಟು ಶಾಂತಿ ಕದಡುವ ಕೆಲಸ ಗಳನ್ನು ಮಾಡುತ್ತಿದ್ದಾರೆ ಅಂತವರ ಬಗ್ಗೆ ನಿಗಾವಹಿಸಲಾಗುತ್ತಿದೆ,

ಆಗಾಗಿ ಎಲ್ಲರೂ ಕಾನೂನು ಬಾಹಿರ ಘಟನೆಗಳು ನಡೆಯುದಂತೆ ಒಳ್ಳೆಯ ರೀತಿಯಲ್ಲಿ ಹಬ್ಬವನ್ನು ಆಚರಣೆ ಮಾಡಿ ಎಂದು ತಿಳಿಸಿದರು .

ಸೂರ್ಯ ಪ್ರಗತಿಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಚುನಾವಣೆ

ಆನೇಕಲ್ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಚಿಕ್ಕಹಾಗಡೆ ತಿಲಕ್ ಕುಮಾರ್. ಎಂ, ಉಪಾಧ್ಯಕ್ಷರಾಗಿ ಮಂಜುನಾಥ್ ರವರು ಅವಿರೋಧವಾಗಿ ಆಯ್ಕೆಗೊಂಡರು.

ನೂತನ ಅಧ್ಯಕ್ಷ ಚಿಕ್ಕಹಾಗಡೆ ತಿಲಕ್ ಕುಮಾರ್ ಮಾತನಾಡಿ ಸಹಕಾರ ಸಂಘವನ್ನು ರೈತ ಸ್ನೇಹಿಯಾಗಿ ಮಾಡುವ ನಿಟ್ಟಿನಲ್ಲಿ ಎಲ್ಲರ ಸಹಕಾರ ಪಡೆದು ಕೆಲಸ ಮಾಡಲಾಗುವುದು. ಆನೇಕಲ್ ತಾಲ್ಲೂಕಿಗೆ ಪಡಿತರ ಪೂರೈಸುವ ಸಾಮರ್ಥ್ಯವನ್ನು ಟಿಎಪಿಸಿಎಂಎಸ್ ಹೊಂದಿತ್ತು. ಆದರೆ ಕೆಲವು ಕಾರಣಗಳಿಂದಾಗಿ ಗೋದಾಮು ಸೌಲಭ್ಯ ತಪ್ಪಿದೆ. ಮುಂಬರುವ ದಿನಗಳಲ್ಲಿ ಗೋದಾಮು ಸೌಲಭ್ಯ ಕಲ್ಪಿಸುವುದರ ಜೊತೆಗೆ ಕಟ್ಟಡದ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಗುವುದು.

ಹಾಗೇಯೇ ಟಿಎಪಿಸಿಎಂಎಸ್ ಕಚೇರಿಯ ಕಟ್ಟಡದಲ್ಲಿ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸಲು ಆದ್ಯತೆ



ನೀಡಲಾಗುವುದು. ಕಳೆದ ಕೆಲವು ದಿನಗಳಿಂದ ಪಡಿತರ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ, ಹಾಗಾಗಿ ಪಡಿತರ ಪಡೆಯಲು ಬರುವ ಗ್ರಾಹಕರ ನೆರಳಿಗಾಗಿ ಶೆಡ್, ಕುಡಿಯುವ ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು. ಸಂಘದ ಆದಾಯ ಏರಿಸುವುದರ ಜೊತೆಗೆ ರೈತ ಸ್ನೇಹಿಯಾಗಿ ಕಾರ್ಯ ನಿರ್ವಹಿಸಲಾಗುವುದು ಎಂದರು.

ಆನೇಕಲ್ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕರುಗಳಾದ ಎಂ. ಬಾಬುರೆಡ್ಡಿ, ನೇತ್ರಾ ಧನಂಜಯ, ಮುನಿಚೌಡಪ್ಪ, ಮಂಜುನಾಥ್, ಎ. ವಿನೀತ್, ಮುರಳಿಕೃಷ್ಣ, ಮಂಜುನಾಥ ರೆಡ್ಡಿ, ಗಿರಿಜಮ್ಮ, ಶಿವಾನಂದ್, ಹರೀಶ್, ಬಿಡಿಸಿಸಿ ನಿರ್ದೇಶಕ ಭಾರ್ಗವ ರೆಡ್ಡಿ, ಬಿ.ಜಿ.ಅಂಜನಪ್ಪ, ಸೋಮಶೇಖರ ರೆಡ್ಡಿ, ಮುತ್ತೂರು ನಾರಾಯಣಪ್ಪ, ದೊಡ್ಡಹಾಗಡೆ ಹರೀಶ್ ಗೌಡ, ಮುಖಂಡರಾದ ವೆಂಕಟಸ್ವಾಮಿ, ದಿನ್ನೂರು.ಪಿ.ರಾಜು ಸೇರಿದಂತೆ ಗಣ್ಯರು, ಮುಖಂಡರು ನೂತನ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ ಬೃಹತ್ ಹೂವಿನ ಹಾರ ಹಾಕಿ ಅಭಿನಂದನೆ ಸಲ್ಲಿಸಿದರು.

ವಿವಿಧ ಸಾಲ ಸೌಲಭ್ಯ : ವಿಶ್ವಕರ್ಮ ಜನಾಂದವರಿಂದ ಆನ್‌ಲೈನ್ ಅರ್ಜಿ ಆಹ್ವಾನ

ತುಮಕೂರು: ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ವಿಶ್ವಕರ್ಮ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪಂಚವೃತ್ತಿಅಭಿವೃದ್ಧಿಗಾಗಿಆರ್ಥಿಕನೆರವು, ಸ್ವಯಂ ಉದ್ಯೋಗ ನೇರಸಾಲ, ಅರಿವು–ಶೈಕ್ಷಣಿಕ ನೇರ ಸಾಲ ಯೋಜನೆ(ಹೊಸದು–ನವೀಕರಣ), ಗಂಗಾ ಕಲ್ಯಾಣ, ಸ್ವಾವಲಂಬಿ ಸಾರಥಿ, ವಿದೇಶಿ ವ್ಯಾಸಂಗ, ಸ್ವಾತಂತ್ರ್ಯ ಅಮೃತ ಮುನ್ನಡೆ ಹಾಗೂ ಹೊಲಿಗೆ ಯಂತ್ರ(ದುರ–ದಚಿರ) ಯೋಜನೆಗಳಡಿ ಸಾಲ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿದಾರರು 2024–25 ಮತ್ತು 2025–26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿ ಆಯ್ಕೆಯಾಗದವರು ಮತ್ತೊಮ್ಮೆ ಮರು ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಆಸಕ್ತರು https://www.sevasindhu.karnataka.gov.in ಪೋರ್ಟಲ್ ಮೂಲಕ ಗ್ರಾಮ ಒನ್/ ಕರ್ನಾಟಕ ಒನ್/ ತುಮಕೂರು ಒನ್ ಸೇವಾ ಕೇಂದ್ರದಲ್ಲಿ ಸೆಪ್ಟೆಂಬರ್ 30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಡಿ ಸೌಲಭ್ಯಕ್ಕಾಗಿ www.koush alkar.com ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ https://kvcdcl.karnataka.gov.in ಅಥವಾ ಸಹಾಯವಾಣಿ ಸಂಖ್ಯೆ 080–22374848, 7899899039 ಅಥವಾ ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ 0816–2005008ನ್ನು ಸಂಪರ್ಕಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಸಾಲ ಸೌಲಭ್ಯ : ವಿಶ್ವಕರ್ಮ ಜನಾಂದವರಿಂದ ಆನ್‌ಲೈನ್ ಅರ್ಜಿ ಆಹ್ವಾನ

ತುಮಕೂರು : ಕರ್ನಾಟಕ ಒಕ್ಕಲಿಗ ಸಮುದಾಯಗಳ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ಒಕ್ಕಲಿಗ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸ್ವಂ ಯಂ ಉದ್ಯೋಗ ನೇರಸಾಲ, ಗಂಗಾ ಕಲ್ಯಾಣ, ಸ್ವಾವಲಂಬಿ ಸಾರಥಿ, ಸ್ವಯಂ ಉದ್ಯೋಗ ಸಾಲ(ವಾಣಿಜ್ಯ ಬ್ಯಾಂಕುಗಳ ಸಹಂ ಯೋಗದೊಂದಿಗೆ) ಅರಿವು–ಶೈಕ್ಷಣಿಕ ನೇರ ಸಾಲ ಯೋಜನೆ(ಹೊಸದು–ನವೀಕರಣ), ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಸಾಲ(ಹೊಸದು) ಹಾಗೂ ಸ್ವಾತಂತ್ರ್ಯ ಮಹೋತ್ಸವದ ಅಮೃತ ಮುನ್ನಡೆ ಯೋಜನೆಯ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮ ಯೋಜನೆಗಳಡಿ ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಬಹುದಾಗಿದೆ. 2024–25 ಮತ್ತು 2025–26ನೇ ಸಾಲುಗಳಲ್ಲಿ ಅರ್ಜಿ ಸಲ್ಲಿಸಿ ಆಯ್ಕೆಯಾಗದವರು ಮತ್ತೊಮ್ಮೆ ಮರು ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಆಸಕ್ತರು https://www.sevasindhu.karnataka.gov.in ಪೋರ್ಟಲ್ ಮೂಲಕ ಗ್ರಾಮ ಒನ್/ ಕರ್ನಾಟಕ ಒನ್/ ತುಮಕೂರು ಒನ್ ಸೇವಾ ಕೇಂದ್ರದಲ್ಲಿ ಸೆಪ್ಟೆಂಬರ್ 30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆಯಡಿ ಸೌಲಭ್ಯಕ್ಕಾಗಿ https://www.koushalkar.com ಮೂಲಕ ಅರ್ಜಿ ಸಲ್ಲಿಸಬಹುದು.

ಕಾನೂನು ರೈತನನ್ನು ಎದುರಿಸುವ ಆಯುಧವಲ್ಲ;ರೈತನ ಹಾಗೂ ಆತನ ಭೂಮಿಯನ್ನು ರಕ್ಷಿಸುವ ಕವಚವಾಗಿದೆ

ಸೂರ್ಯಪ್ರಗತಿನ್ಯೂಸ್.ಕಾಂ

ತಿಪಟೂರು : ಬಗರ್‌ಹುಕುಂ ಅಡಿಯಲ್ಲಿ ರೈತರು ಸಾಗುವಳಿ ಮಾಡುತ್ತಿದ್ದ ಜಮೀನನ್ನು ಅರಣ್ಯ ಹಾಗೂ ಸರ್ಕಾರಕ್ಕೆ ಸೇರಿದ ಜಮೀನು ಎಂದು ದಾಖಲಿಸಿ ವಶಕ್ಕೆ ಪಡೆದಿರುವ ಕ್ರಮವನ್ನು ವಿರೋಧಿಸಿ ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ರುದ್ರಾಪುರ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ (ಸಾಮೂಹಿಕ ನಾಯಕತ್ವ), ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ವತಿಯಿಂದ ಸೋಮವಾರ ನಡೆದ ರೈತ ದ್ರೋಹಿ ಸರ್ಕಾರದ ವಿರುದ್ಧ ಪ್ರತಿರೋಧದ ಸಮಾವೇಶ ಹಾಗೂ ರೈತರಿಗೆ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮ ನಡೆಯಿತು.

ನಿವೃತ್ತ ಜಿಲ್ಲಾಧಿಕಾರಿ ನಿಂಗಪ್ಪ ಮಾತನಾಡಿ ಕಾನೂನು ಎಂಬುದು ರೈತನನ್ನು ಎದುರಿಸುವ ಆಯುಧವಲ್ಲ, ರೈತನ ಹಾಗೂ ಆತನ ಭೂಮಿಯನ್ನು ರಕ್ಷಿಸುವ ಕವಚವಾಗಿದೆ. ಈ ಕವಚವನ್ನು ಹೇಗೆ ಬಳಸಿಕೊಳ್ಳಬೇಕು ಎಂಬ ಅರಿವು ಪ್ರತಿಯೊಬ್ಬ ರೈತನಿಗೂ ಇರಬೇಕು.ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ರೈತರ ಅಜ್ಞಾನವನ್ನು ದುರುಪಯೋಗಪಡಿಸಿಕೊಳ್ಳದಂತೆ ರೈತರು ಸದಾ ಎಚ್ಚರಿಕೆ ವಹಿಸಬೇಕು. ತಮ್ಮ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಸರಿಯಾಗಿ ಪರಿಶೀಲಿಸಿಕೊಂಡು, ಕಂದಾಯ ಇಲಾಖೆಯ ನಿಯಮಗಳು ಹಾಗೂ ಭೂಮಿಗೆ ಸಂಬಂಧಿಸಿದ ಕಾನೂನುಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬೇಕು ಪ್ರತಿಯೊಬ್ಬ ರೈತನು ತನ್ನ ಜಮೀನಿನ ಪಹಣಿ (ಆರ್‌ಟಿಸಿ) ಸೇರಿದಂತೆ ಅಗತ್ಯ



ದಾಖಲೆಗಳನ್ನು ನಿಯಮಿತವಾಗಿ ಪರಿಶೀಲಿಸಬೇಕು. ಜಮೀನಿನ ಗಡಿಭಾಗಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು, ಯಾವುದೇ ಬದಲಾವಣೆ ಅಥವಾ ವಿವಾದ ಕಂಡುಬಂದರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದರು. ಸರ್ಕಾರವು ರೈತರ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ರೈತರಿಗೆ ಇರುವ ಹಕ್ಕುಗಳು, ಪರಿಹಾರದ ನಿಯಮಗಳು ಹಾಗೂ ಆಕ್ಷೇಪಣೆ ಸಲ್ಲಿಸುವ ವಿಧಾನಗಳ ಬಗ್ಗೆ ಮುಂಚಿತವಾಗಿ ತಿಳಿದುಕೊಳ್ಳಬೇಕು. ಕೇವಲ ಅಧಿಕಾರಿಗಳ ಮಾತನ್ನು ಅವಲಂಬಿಸದೆ, ದಾಖಲೆಗಳನ್ನು ಪರಿಶೀಲಿಸಿ ಕಾನೂನುಬದ್ಧವಾಗಿ ಮುಂದಿನ ಕ್ರಮ ಕೈಗೊಳ್ಳುವ ಸಾಮರ್ಥ್ಯವನ್ನು ರೈತರು ಬೆಳೆಸಿಕೊಳ್ಳಬೇಕು ಎಂದರು.

ರೈತನ ಭೂಮಿ ಕೇವಲ ಮಣ್ಣಿನ ತುಂಡಲ್ಲ. ಅದು ರೈತನ ಕುಟುಂಬದ ಬದುಕಿನ ಆಧಾರವಾಗಿದ್ದು, ಆತನ ಸ್ವಾಭಿಮಾನದ ಸಂಕೇತವೂ ಆಗಿದೆ. ಆದ್ದರಿಂದ ಭೂಮಿಗೆ ಸಂಬಂಧಿಸಿದ ಪ್ರತಿಯೊಂದು ದಾಖಲೆಯನ್ನೂ ಸುರಕ್ಷಿತವಾಗಿ ಇಟ್ಟುಕೊಂಡು, ಕಾಲಕಾಲಕ್ಕೆ ಪರಿಶೀಲಿಸುವ ಅಭ್ಯಾಸವನ್ನು ರೈತರು ಬೆಳೆಸಿಕೊಳ್ಳಬೇಕು ರೈತನಾಗಿರುವುದನ್ನು ಕೀಳರಿಮೆಯಿಂದ ನೋಡುವ ಮನೋಭಾವವನ್ನು ಬಿಟ್ಟು, ನಾನು ರೈತ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬೇಕು. ರೈತರ ಹಕ್ಕುಗಳು ಹಾಗೂ ಭೂಮಿಯ ರಕ್ಷಣೆಗೆ ಸರ್ಕಾರದ ಯೋಜನೆಗಳ ಜೊತೆಗೆ ಕಾನೂನು ಅರಿವೂ ಅಗತ್ಯವಾಗಿದೆ ಎಂದು ನಿಂಗಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಸಾಮೂಹಿಕ ನಾಯಕತ್ವದ ಮುಖಂಡ ಕೆ.ಟಿ.ಗಂಗಾಧರ್ ಮಾತನಾಡಿ ಹಲವು ವರ್ಷಗಳಿಂದ ಬಗರ್‌ಹುಕುಂ ಅಡಿಯಲ್ಲಿ ಜಮೀನು ಸಾಗುವಳಿ ಮಾಡಿಕೊಂಡು ಜೀವನ ನಡೆಸುತ್ತಿರುವ ರೈತರನ್ನು ಒಕ್ಕಲೆಬ್ಬಿಸುವುದು ಅಥವಾ ಅವರ ಭೂಹಕ್ಕಿಗೆ ಧಕ್ಕೆ ತರುವುದು ಯಾವುದೇ ಕಾರಣಕ್ಕೂ ಸೂಕ್ತವಲ್ಲ ಎಂದರು.ದೇಶದ ಆಹಾರ ಭದ್ರತೆಯನ್ನು ಕಾಪಾಡುವಲ್ಲಿ ರೈತರ ಪರಿಶ್ರಮ ಮಹತ್ವದ್ದಾಗಿದೆ. ಬಗರ್‌ಹುಕುಂ ಸಾಗುವಳಿ ಯೋಜನೆಯಡಿ ಅರ್ಹ ರೈತರಿಗೆ ಭೂಮಿಯ ಹಕ್ಕು ಕಲ್ಪಿಸುವ ಮೂಲಕ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗಿದೆ. ಇಂತಹ ಕೃಷಿ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವ ರೈತರ ಬದುಕಿಗೆ ತೊಂದರೆ ನೀಡುವ ಬದಲು ಅವರ ಸಾಗುವಳಿ ಹಕ್ಕುಗಳನ್ನು ರಕ್ಷಿಸಬೇಕು.ರೈತರ ಜಮೀನಿಗಳಿಗೆ ತೊಂದರೆ ನೀಡುವ ಅಂತಹ ಅಧಿಕಾರಿಗಳು ಗ್ರಾಮಕ್ಕೆ ಬಂದರೆ ದೇವಾಸ್ಥಾನದ ಕಂಬಕ್ಕೆ ಕಟ್ಟಿ ನಂತರ ನಾವುಗಳು ಬರುತ್ತೇವೆ ಎಂದರು.

ರುದ್ರಾಪುರ ಗ್ರಾಮದ ರೈತರು ಹಲವು ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಜಮೀನಿನ ಪಹಣಿಯಲ್ಲಿ ಸರ್ಕಾರ ಎಂದು ನಮೂದಿಸಿ ಭೂಮಿ ವಶಪಡಿಸಿಕೊಳ್ಳಲಾಗಿದೆ. ಕಂದಾಯ ಸಚಿವರು ರೈತರನ್ನು ಒಕ್ಕಲೆಬ್ಬಿಸುವ ಯಾವುದೇ ನಿರ್ಣಯ ಕೈಗೊಂಡಿಲ್ಲ ಎಂದು ತಿಳಿಸಿದರೂ ಆದರೆ, ಸ್ಥಳೀಯ ಮಟ್ಟದಲ್ಲಿ ರೈತರ ಹೆಸರಿನಲ್ಲಿದ್ದ ಪಹಣಿಗಳನ್ನು ತೆಗೆದುಹಾಕಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಭೂದಾಖಲೆಗಳಲ್ಲಿ ಏಕಾಏಕಿ ಬದಲಾವಣೆ ಮಾಡುವ ಬದಲು ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ರುದ್ರಾಪುರ ಸುತ್ತಮುತ್ತಲಿನ ಕಲ್ಲು ಮಣ್ಣಿನ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು ಗುರುತಿಸಿದ್ದು ಸರ್ಕಾರ ತಕ್ಷಣ ಸ್ಥಳ ಪರಿಶೀಲನೆ ನಡೆಸಿ ನೀರು, ಮೇವು ಹಾಗೂ ಭೂಹಕ್ಕಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಸಮಾವೇಶದಲ್ಲಿ 500ಕ್ಕೂ ಹೆಚ್ಚು ರೈತ ಕುಟುಂಬಗಳು ಭಾಗವಹಿಸಿ ಭೂಹಕ್ಕುಗಳ ರಕ್ಷಣೆಗೆ ಹೋರಾಟ ಮುಂದುವರಿಸುವ ಸಂಕಲ್ಪ ವ್ಯಕ್ತಪಡಿಸಿದರು. ರೈತರ ಜಮೀನು ವಶಪಡಿಸಿಕೊಳ್ಳುವ ಕ್ರಮ ಮುಂದುವರಿದರೆ ಗ್ರಾಮದಿಂದ ಜಿಲ್ಲಾಮಟ್ಟದವರೆಗೆ ಹೋರಾಟ ತೀವ್ರಗೊಳಿಸುವುದಾಗಿ ಸಂಘಟನೆಗಳ ಮುಖಂಡರು ಎಚ್ಚರಿಸಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಿದ್ದಬಸವಯ್ಯ ವಹಿಸಿದ್ದರು. ಎಐಕೆಕೆಎಮ್‌ಎಸ್ ಸಂಘಟನೆಯ ರಾಜ್ಯಾಧ್ಯಕ್ಷ ಎಂ. ಶಶಿಧರ್, ಉಪಾಧ್ಯಕ್ಷ ಶಿವಪ್ರಕಾಶ್, ಸಹ ಕಾರ್ಯದರ್ಶಿ ಪ್ರಸನ್ನ ಕುಮಾರ್ ಸೇರಿದಂತೆ ಹಲವು ರೈತ ಮುಖಂಡರು ಮಾತನಾಡಿದರು.

ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಮುಖಂಡರಾದ ಜಯನಂದಯ್ಯ,ದೇವರಾಜು ತಿಮ್ಲಾಪುರ,ಸಿದ್ಧಪ್ಪಬಳವನೇರಲು, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚನ್ನಬಸವಣ್ಣ, ಪ್ರಧಾನ ಕಾರ್ಯದರ್ಶಿ ಯಶವಂತ್, ತಿಮ್ಮೇಗೌಡ ಗಡಬನಹಳ್ಳಿ, ಕೆಆರ್‌ಎಸ್ ಪಕ್ಷದ ಮಲ್ಲಿಕಾರ್ಜುನ್‌ಭಟ್ಟರಹಳ್ಳಿ, ರುದ್ರೇಶಹೊಸದುರ್ಗ, ಲೋಕೇಶ್‌ಭೈರನಾಯಕನಹಳ್ಳಿ, ಅಲ್ಲಾಬಕಾಷ್, ರಾಜಮ್ಮ ರೈತರಾದ ಮಲ್ಲಪ್ಪ, ಕುಮಾರ್, ದಶರಥ, ಓಂಕಾರಮೂರ್ತಿ, ಬಸವನಾಯ್ಕ, ಸೇರಿದಂತೆ ಮಲ್ಲಿದೇವರಹಳ್ಳಿ, ಬಳವನೇರಲು, ಮುದ್ದೇನಹಳ್ಳಿ, ರಟ್ಟೇನಹಳ್ಳಿ, ಮುದ್ದೇನಹಳ್ಳಿ, ಸೊರಗೊಂಡನಹಳ್ಳಿ ಗ್ರಾಮದ ರೈತರು ಉಪಸ್ಥಿತರಿದ್ದರು

ಸಾರ್ವಜನಿಕ ಚರ್ಚೆಗೆ ಸಿದ್ಧ: ಶಾಸಕ ವೆಂಕಟೇಶ್‌ಗೆ ಎಎಪಿ ಪಕ್ಷದ ರಾಮಾಂಜಿನಪ್ಪ ಸವಾಲ್

ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ: ತಮ್ಮ ವಿರುದ್ಧ ಮಾಡುತ್ತಿರುವ ಹಣ ವಸೂಲಿ ಆರೋಪವನ್ನು ತೀವ್ರವಾಗಿ ಖಂಡಿಸಿರುವ ಆಮ್ ಆದ್ಮಿ ಪಾರ್ಟಿಂಯ ಮುಖಂಡ ರಾಮಾಂಜಿನಪ್ಪ ಅವರು, ಪಾವಗಡ ಶಾಸಕ ಹೆಚ್.ವಿ. ವೆಂಕಟೇಶ್ ಅವರಿಗೆ ಸಾರ್ವಜನಿಕ ಚರ್ಚೆಗೆ ಬಹಿರಂಗ ಸವಾಲು ಹಾಕಿದ್ದಾರೆ. ಪಾವಗಡದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ನಾನು ಯಾರ ಹತ್ತಿರ ಹಣ ವಸೂಲಿ ಮಾಡಿದ್ದೇನೆ ಎಂದು ಸಾಬೀತು ಮಾಡಿ, ಇಲ್ಲವಾದರೆ ನಾನು ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕುತ್ತೇನೆ. ಸುಳ್ಳು ಆರೋಪ ಮಾಡುವುದು ನಿಮಗೆ ಒಳ್ಳೆಯದಲ್ಲ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೇರಲಕುಂಟೆ 37 ಎಕರೆ ಹೋರಾಟ:

"ನೇರಲಕುಂಟೆ ಜಮೀನಿನ 37 ಎಕರೆ ವಿಚಾರದಲ್ಲಿ ನಾನು ಸಾರ್ವಜನಿಕರ ಪರವಾಗಿ ಹೋರಾಟ ಮಾಡಿದ್ದೇನೆ. ಆ ಪ್ರಕರಣ ಈಗ ಕೋರ್ಟ್‌ನಲ್ಲಿ ನಡೆಯುತ್ತಿದೆ. ಇದು ವಸೂಲಿಯಲ್ಲ, ಸಾರ್ವಜನಿಕ ಹಿತಾಸಕ್ತಿಯ ಹೋರಾಟ" ಎಂದರು.

ನೀಲಕಂಠೇಶ್ವರ ದೇವಸ್ಥಾನದ 20 ಲಕ್ಷ ಆರೋಪಕ್ಕೆ ಸ್ಪಷ್ಟನೆ:

"ನೀಲಕಂಠೇಶ್ವರ ದೇವಸ್ಥಾನದಲ್ಲಿ ನಾನು 20 ಲಕ್ಷ ವಸೂಲಿ ಮಾಡಿದ್ದೇನೆ ಎಂದು ಶಾಸಕರು ಹೇಳುತ್ತಿದ್ದಾರೆ. ನಾನು ಯಾವತ್ತೂ ಆ ಕೆಲಸ ಮಾಡಿಲ್ಲ. ಆರ್ಯವೈಶ್ಯ ಸಮಾಜದ ಕೆಲವರು ಬಂದು 'ದೇವಾಲಯದ ವಿಚಾರ ಬಿಟ್ಟು ಬಿಡಿ' ಎಂದು ಕೇಳಿದಾಗ, 'ಎಲ್ಲಾ ಜಾತಿಯವರನ್ನು ಸೇರಿಸಿ ಒಂದು ಕಮಿಟಿ ಮಾಡಿ' ಎಂದು ಸಲಹೆ ನೀಡಿದ್ದೆ ಅಷ್ಟೇ. 2001 ರವರೆಗೆ ಅಲ್ಲಿ ಅರ್ಚಕರು ಸಂಬಳ ಪಡೆದ ದಾಖಲೆ ಇದೆ, ಮೊದಲು ಮುಜರಾಯಿ ದೇವಸ್ಥಾನ ಆಗಿತ್ತು ಆದರೆ ಅದನ್ನು ಈಗ ವೀರಶೈವ ಸಂಘದ ಆಸ್ತಿ ಎಂದು ಬಿಂಬಿಸಲಾಗುತ್ತಿದೆ. ಈ ವಿಚಾರ ಬಂದಾಗ ಶಾಸಕರು ಯಾಕೆ ಮಾತನಾಡಲಿಲ್ಲ? ಈಗ ತಮ್ಮ ಕ್ರಷರ್ ವಿಚಾರ ಬಂದಾಗ ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ" ಎಂದು ಪ್ರಶ್ನಿಸಿದರು.



ಬೆಸ್ಕಾಂ ಎಇ ಪ್ರಕರಣ:

" ನಿವೃತ್ತ ಬೆಸ್ಕಾಂ ಎಇ ರಾಮಾಂಜಿನಪ್ಪ ಅವರಿಂದ 5 ಲಕ್ಷ ವಸೂಲಿ ಮಾಡಿದ್ದೇನೆ ಎನ್ನುತ್ತಿದ್ದಾರೆ. ನಾನೇ 5 ಲಕ್ಷ ವಸೂಲಿ ಮಾಡಿದ್ದರೆ, ಇವತ್ತು ಅವರಿಗೆ 50 ಲಕ್ಷ ರಿಕವರಿಗೆ ಆದೇಶ ಬರುತ್ತಿತ್ತಾ? ನಾನು ಹಣ ತೆಗೆದುಕೊಂಡಿದ್ದರೆ ಆ ಕೇಸನ್ನು ಅಲ್ಲಿಗೇ ಬಿಡುತಿ ್ತದ್ದೆ" ಎಂದು ಸಮರ್ಥಿಸಿಕೊಂಡರು.

ಟಿ.ವಿ. ನಾಗೇಶ್ ಬಾಬು ಹೇಳಿಕೆ ಉಲ್ಲೇಖ:

ನಿನ್ನೆ ಟಿ.ವಿ. ವೆಂಕಟೇಶ್ ಅವರ ಹೇಳಿಕೆಗೆ ಸಂಬಂಧಿಸಿದಂತೆ ಟಿ.ವಿ. ನಾಗೇಶ್ ಬಾಬು ಅವರು ನೀಡಿರುವ ಹೇಳಿಕೆ 1961 ರಲ್ಲಿ 4 ಜನ ಆರ್ಯವೈಶ್ಯ ಪ್ರಮುಖರ ಹೆಸರಿನಲ್ಲಿದ್ದ ಆಸ್ತಿ ಅದು ಟಿ.ವಿ. ವೆಂಕಟೇಶ್ ಅವರ ಸ್ವತ್ತಲ್ಲ. ಅಂದು 3 ಎಕರೆ ಸರ್ಕಾರಕ್ಕೆ ಕೊಟ್ಟಿದ್ದರು, ಆದರೆ ಕೆಲವರು ರಾಜಕೀಯ ಬಲದಿಂದ ಮನೆ ಕಟ್ಟಿಕೊಂಡು 30 ವರ್ಷದಿಂದ ಸರ್ವೆಗೂ ಅವಕಾಶ ಕೊಡದೆ ದಬ್ಬಾಳಿಕೆ ಮಾಡಿದ್ದಾರೆ. ಇದರ ವಿರುದ್ಧ ನಾನೇ ಎಎಪಿ ಅವರ ಬಳಿ ದೂರು ಕೊಟ್ಟಿದ್ದೇನೆ, ಅವರು ಹಣಕ್ಕಾಗಿ ಬಂದಿಲ್ಲ" ಎಂದು ನಾಗೇಶ್ ಬಾಬು ತಿಳಿಸಿದರು.

ಹನುಮಂತನಹಳ್ಳಿ ಜಮೀನು ಅಕ್ರಮ:

"ಹನುಮಂತನಹಳ್ಳಿಯಲ್ಲಿ ನಾಯಕ ಜನಾಂಗಕ್ಕೆ ಸೇರಿದ 6 ಎಕರೆ ಜಮೀನನ್ನು ಅಕ್ರಮವಾಗಿ ಬಳಸಿಕೊಳ್ಳಲಾಗಿದೆ. ನಮಗೆ ಗೊತ್ತಿಲ್ಲದೆ ಒಂದು ಎಕರೆಗೆ 1000 ರೂಪಾಯಿಯಂತೆ ಅಗ್ರಿಮೆಂಟ್ ಮಾಡಿಕೊಂಡು ಮೋಸ ಮಾಡಿದ್ದಾರೆ. ಅವರು ಕಟ್ಟಿರುವ ಶೆಡ್ ಮತ್ತು ಗೆಸ್ಟ್ ಹೌಸ್‌ಗೆ ಕರೆಂಟ್ ಬಿಲ್ ಕೂಡ ನಾವೇ ಕಟ್ಟಬೇಕೆಂದು ಅಗ್ರಿಮೆಂಟ್‌ನಲ್ಲಿ ಬರೆಸಿಕೊಂಡಿದ್ದಾರೆ. ಇದು ಯಾವ ನ್ಯಾಯ?" ಎಂದು ಪ್ರಶ್ನಿಸಿದರು.

ತಾಲ್ಲೂಕಿನ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ, ಸತ್ಯಾಸತ್ಯತೆ ಜನರಿಗೆ ಗೊತ್ತಿದೆ ಎಂದು ಅವರು ಹೇಳಿದರು.

ಸೆ. 18ರಂದು ಮನೋರೋಗ ತಜ್ಞರು, ಸೈಕಾಲಜಿಸ್ಟ್ ಹುದ್ದೆಗೆ ನೇರ ಸಂದರ್ಶನ

ತುಮಕೂರು : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ವತಿಯಿಂದ ಮನೋರೋಗ ತಜ್ಞರು (Psychiatrist) ಹಾಗೂ ಸೈಕಾಲಜಿಸ್ಟ್ (Clinical Psychologist/ Psychologist) ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಸೆಪ್ಟೆಂಬರ್ 18ರಂದು ನೇರ ಸಂದರ್ಶನ ನಡೆಯಲಿದ್ದು, ಅರ್ಹ ಅಭ್ಯರ್ಥಿಗಳು ಹಾಜರಾಗಬಹುದಾಗಿದೆ.

ವಿದ್ಯಾರ್ಹತೆ, ಹುದ್ದೆಗಳ ಸಂಖ್ಯೆ, ವಯೋಮಿತಿ ಹಾಗೂ ಇತರೆ ವಿವರಗಳಿಗಾಗಿ ಜಾಲತಾಣ https://nhm.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9448416330, 9916856159ನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ವಸತಿ ಶಾಲೆಗಳಿಗೆ ವೈದ್ಯಾಧಿಕಾರಿಗಳ ಭೇಟಿ ಕಡ್ಡಾಯ : ಅಶ್ವಿಜಾ ಬಿ.ವಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ವಸತಿ ಶಾಲೆಗಳಿಗೆ ವೈದ್ಯಾಧಿಕಾರಿಗಳು ಕಡ್ಡಾಯವಾಗಿ ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶ್ವಿಜಾ ಬಿ.ವಿ. ಸೂಚಿಸಿದರು.



ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿಂದು ಜರುಗಿದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದ ಮೊದಲನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಹಾಸ್ಟಲ್‌ಗಳಿಗೆ ಒಬ್ಬ ನೋಡಲ್ ವೈದ್ಯಾಧಿಕಾರಿಗಳನ್ನು ನೇಮಿಸಿ ಕಾಲ-ಕಾಲಕ್ಕೆ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಮಕ್ಕಳ ಆರೋಗ್ಯ ತಪಾಸಣೆ ಮಾಡಬೇಕು ಎಂದರು.

ಪಾವಗಡ ಹಾಗೂ ಶಿರಾ ತಾಲ್ಲೂಕಿನಲ್ಲಿ ಬಾಲ ಗರ್ಭಿಣಿಯರ ಸಂಖ್ಯೆ ಹೆಚ್ಚಿದ್ದು, ಆಶಾ ಕಾರ್ಯಕರ್ತೆಯರ ಮುಖಾಂತರ ಐ.ಇ.ಸಿ.ಗಳನ್ನು ಪ್ರದರ್ಶಿಸಬೇಕು ಹಾಗೂ ಆಡಿಟ್ ನಡೆಸಲು ಸೂಚಿಸಿದರಲ್ಲದೆ, ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸಬೇಕು. ಆಶಾ ಕಾರ್ಯಕರ್ತೆಯರು ಮನೆ-ಮನೆಗೆ ಹೋಗಿ ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು. ಆರೋಗ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಗದಿತ ಸಮಯಕ್ಕೆ ಶಾಲಾ-ಕಾಲೇಜುಗಳಿಗೂ ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಬೇಕು ಎಂದರು.

ಸಮುದಾಯ ಆರೋಗ್ಯ ಅಧಿಕಾರಿಗಳು ಕಡ್ಡಾಯವಾಗಿ ಲಸಿಕಾ ಅಭಿಯಾನದಲ್ಲಿ ಭಾಗವಹಿಸಬೇಕೆಂದು ತಿಳಿಸಿದರು.

ಈ ವೇಳೆ ಸಿದ್ದಾರ್ಥ ವೈದ್ಯಕೀಯ ಮಹಾ ವಿದ್ಯಾಲಯದ ವತಿಯಿಂದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಹೃದಯಾಘಾತ (ಪ್ರಜ್ಞಾಹೀನ ಸ್ಥಿತಿಯಲ್ಲಿರುವಾಗ) ಸಂದರ್ಭದಲ್ಲಿ ಮಾಡಬೇಕಾದ ಪ್ರಥಮ ಚಿಕಿತ್ಸೆಯ (ಅಕಖ) ಬಗ್ಗೆ ಪ್ರಾತ್ಯಕ್ಷಿಕೆಗಳ ಮೂಲಕ ವಿವರಣೆ ನೀಡಲಾಯಿತು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ(ಆಡಳಿತ) ಈಶ್ವರಪ್ಪ, ಮುಖ್ಯ ಯೋಜನಾಧಿಕಾರಿ ಸಣ್ಣ ಮಸಿಯಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ। ಚಂದ್ರಶೇಖರ್, ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಅಧಿಕಾರಿ ಮೋಹನ್ ಸೇರಿದಂತೆ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಭಾಗಿಯಾಗಿದ್ದರು.

ಕಬಡ್ಡಿಯಲ್ಲಿ ಪ್ರಥಮ ಸ್ಥಾನ ಪಡೆದ ಸರ್ಕಾರಿ ಪ್ರೌಢಶಾಲೆ



ಪಾವಗಡ: ಪಟ್ಟಣದಲ್ಲಿ ನಡೆದ 2026-27ನೇ ಸಾಲಿನ ವೈ.ಎನ್. ಹೊಸಕೋಟೆ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ದೊಡ್ಡಹಳ್ಳಿ ಸರ್ಕಾರಿ ಪ್ರೌಢಶಾಲೆಯ ಬಾಲಕರ ಕಬಡ್ಡಿ ತಂಡ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದೆ.

ಈ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಶಾಲೆಯ ಮುಖ್ಯ ಶಿಕ್ಷಕ ಲಕ್ಷ್ಮ ನಾಯ್ಕ, ಸಹ ಶಿಕ್ಷಕರು, ಪೋಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

ಹೊಳವನಹಳ್ಳಿಗೆ ಬಸ್ ಬಾರದೆ ವಿದ್ಯಾರ್ಥಿಗಳ ಪರದಾಟ: ಸಾರಿಗೆ ಇಲಾಖೆ ಗಮನ ಹರಿಸುವಂತೆ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ: ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಹೋಬಳಿ ಕೇಂದ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದರೂ, ಸಾರಿಗೆ ಸಂಪರ್ಕದ ಕೊರತೆಯಿಂದ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಹೊಳವನಹಳ್ಳಿ ಹೋಬಳಿ ವ್ಯಾಪ್ತಿಯ ಅರಸಾಪುರ, ಬೈರೇನಹಳ್ಳಿ, ಅಕ್ಕಿರಾಂಪುರ, ಸೊಂಪುರ ಸೇರಿದಂತೆ ಹತ್ತಾರು ಹಳ್ಳಿಗಳಿಂದ ಪ್ರತಿದಿನ ನೂರಾರು ವಿದ್ಯಾರ್ಥಿಗಳು ಹೊಳವನಹಳ್ಳಿಗೆ ಶಾಲಾ-ಕಾಲೇಜಿಗೆ ಬರುತ್ತಾರೆ. ಆದರೆ ಗೌರಿಬಿದನೂರು ಮತ್ತು ತುಮಕೂರು ಕಡೆಯಿಂದ ಬರುವ ಬಸ್‌ಗಳು ಹೊಳವನಹಳ್ಳಿಗೆ ಬಾರದೆ ಗೌರಗಾನಹಳ್ಳಿ ಕ್ರಾಸ್ ನಲ್ಲಿಯೇ ಹಾದು ಹೋಗುತ್ತಿವೆ.

ಇದರಿಂದ ವಿದ್ಯಾರ್ಥಿಗಳು ಗೌರಗಾನಹಳ್ಳಿ ಕ್ರಾಸ್ ನಿಂದ ಹೊಳವನಹಳ್ಳಿವರೆಗೆ ಸುಮಾರು 5 ಕಿ.ಮೀ ಹಾಗೂ ಸೋಂಪುರ ಗ್ರಾಮದಿಂದ 3 ಕಿ.ಮೀ ದೂರ ನಡೆದುಕೊಂಡು ಬರುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆಗಾಲದಲ್ಲಿ ಈ ಸಮಸ್ಯೆ ಮತ್ತಷ್ಟು ಹೆಚ್ಚಾಗಿದೆ. ಬೆಳಗ್ಗೆ ಶಾಲಾ-ಕಾಲೇಜು ಸಮಯದಲ್ಲಿ ಮತ್ತು ಸಂಜೆ ತಿರುಗಿ ಹೋಗುವ ಸಮಯದಲ್ಲಿ ಹೊಳವನಹಳ್ಳಿ ಮಾರ್ಗವಾಗಿ ಬಂದು ವಾಪಸ್ ಹೋಗುವ ವ್ಯವಸ್ಥೆ ಕಲ್ಪಿಸಬೇಕು ಎಂದು ವಿದ್ಯಾರ್ಥಿಗಳು ಮತ್ತು ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಸಾರಿಗೆ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ವಿದ್ಯಾರ್ಥಿಗಳ ಸಮಸ್ಯೆಗೆ ಪರಿಹಾರ ಒದಗಿಸಬೇಕು ಎಂದು ಒತ್ತಾಯಿಸಿದ್ದಾರೆ. ಹೊಳವನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ರಸ್ತೆ ಕಾಮಗಾರಿ ವಿಳಂಬ ಆಗುತ್ತಿರುವ ಹಿನ್ನೆಲೆ ಹೊಳವನಹಳ್ಳಿಗೆ ಬಸ್‌ಗಳು ಬಾರದಿರುವುದರಿಂದ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆ ಆಗುತ್ತಿದೆ.



ಕೊರಟಗೆರೆ ಗೌರಗಾನಹಳ್ಳಿ ಕ್ರಾಸ್ ಮಾರ್ಗವಾಗಿ ಹೊಳವನಹಳ್ಳಿಗೆ ಬರುತ್ತಿದ್ದ ಬಸ್‌ಗಳು ಮಾರ್ಗ ಬದಲಿಸಿ ಗೌರಗಾನಹಳ್ಳಿ ಕತ್ತಿನಾಗೇನಹಳ್ಳಿ ಅಕ್ಕಿರಾಂಪುರದ ಮೂಲಕ ಸಂಚರಿಸುತ್ತಿವೆ.. ಇದರಿಂದ ಸಾರ್ವಜನಿಕರಿಗೆ, ವೃದ್ಧರಿಗೆ ಶಾಲಾ ಕಾಲೇಜುಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಬಸ್ ಸಿಗದೇ ಮತ್ತು ಹೊಳವನಹಳ್ಳಿಗೆ ಬಸ್ ಬರದೇ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಹೊಳವನಹಳ್ಳಿಯಲ್ಲಿ ರಸ್ತೆ ಕೆಲಸ ನಡೆಯುತ್ತಿರುವುದರಿಂದ ಬಸ್‌ಗಳು ಬರದೇ ಸುಮಾರು ಹದಿನೈದು ದಿನಗಳಿಂದ ಗೌರಗಾನಹಳ್ಳಿ ಕ್ರಾಸ್ ನಿಂದ ಹೊಳವನಹಳ್ಳಿಗೆ ನಾವು ನಡೆದುಕೊಂಡೇ ಶಾಲೆಗೆ ತೆರಳುತ್ತಿದ್ದೇವೆ. ಸಂಬಂಧ ಪಟ್ಟ ಅಧಿಕಾರಿಗಳು ಬಸ್ ವ್ಯವಸ್ಥೆ ಮಾಡಿದರೆ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ.

ಭಾರ್ಗವಿ. ಶಾಲಾ ವಿದ್ಯಾರ್ಥಿನಿ

ರಸ್ತೆ ಕಾಮಗಾರಿ ತಡವಾಗಿ ಮಾಡುತ್ತಿರುವುದರಿಂದ ಹೊಳವನಹಳ್ಳಿಗೆ ಬಸ್‌ಗಳು ಬರದೇ ಶಾಲಾ ಮಕ್ಕಳಿಗೆ ಬಸ್ ಸಿಗದೇ ಶಾಲೆಗೆ ತಡವಾಗಿ ಬರುತ್ತಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಯ ಜೊತೆಗೆ ಮಾತನಾಡಿದ್ದೇನೆ ಇದಕ್ಕೆ ಯಾವುದೇ ರೀತಿಯ ಸ್ಪಂದನೆ ಸಿಕ್ಕಿಲ್ಲ. ದೂರವಾಣಿ ಮೂಲಕ ಸಂಬಂದ ಪಟ್ಟ ಇಂಜಿನಿಯರ್ ಜೊತೆ ಮಾತನಾಡಿದೆ ಆದರೆ ಅವರು ಬೇಜವಾಬ್ದಾರಿಯಾಗಿ ಮಾತನಾಡುತ್ತಿದ್ದಾರೆ.

ಲಾಲಾನಾಯ್ಕ್, ಮುಖ್ಯ ಶಿಕ್ಷಕ ಹೊಳವನಹಳ್ಳಿ

ಫುಟ್ ಪಾತ್ ತೆರವು: ಅಧಿಕಾರಿಗಳಿಂದ ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಕಾರ್ಯಾಚರಣೆಯಲ್ಲಿ ಲೋಪ ದೋಷ

ತುಮಕೂರಿನಲ್ಲಿ ದೊರೆ ಮಾಡಿದ್ದಕ್ಕೆ ದಂಡ ಇಲ್ಲ; ಪುಟ್ಬಾತ್ ಒತ್ತುವರಿ ಮಾಡಿ ಕಾಮಗಾರಿ; ಪರಿಸರ ಸಂರಕ್ಷಣಾ ಪಡೆಯ ಅಧ್ಯಕ್ಷ ಜಿ.ಎಸ್. ಬಸವರಾಜು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಮಹಾನಗರ ಪಾಲಿಕೆಯ ಅಧಿಕಾರಿಗಳು ಸುಪ್ರೀಂ ಕೋರ್ಟಿನ ಆದೇಶದಂತೆ ನಗರದಲ್ಲಿ 31 ಕಿಲೋ ಮೀಟರಿಗೂ ಹೆಚ್ಚು ಪಾದಾಚಾರಿ ಮಾರ್ಗದ ಒತ್ತುವರಿಯನ್ನು ತೆರವುಗೊಳಿಸಿದ್ದೇವೆ ಎಂಬ ಹೇಳಿಕೆ ನೀಡಿದ್ದಾರೆ. ಆದರೆ, ಈತೆರವು ಕಾಯಾಚರಣೆಯಲ್ಲಿ ಗುರುತರವಾದ ಲೋಪ ದೋಷಗಳು ಎದ್ದುಕಾಣುತ್ತಿದೆ ಎಂದು ರಾಷ್ಟ್ರೀಯ ಮಾನವ ಪರಿಸರ ಸಂರಕ್ಷಣಾ ಪಡೆಯ ಅಧ್ಯಕ್ಷ ಜಿ.ಎಸ್. ಬಸವರಾಜು ಹೇಳಿದ್ದಾರೆ.





ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರಅನ್ನುವಂತೆ, ಬಡ ವ್ಯಾಪಾರಿಗಳು, ಹೊಟ್ಟೆ ಪಾಡಿಗಾಗಿ ದಿನನಿತ್ಯದ ವ್ಯಾಪಾರದಲ್ಲಿ ತೊಡಗಿಕೊಂಡಿದ್ದವರನ್ನು ತೆರವು ಗೊಳಿಸಿ, ಪ್ರಮುಖವಾಗಿ ಪುಟ್ ಪಾತ್ ಅನ್ನು ಒತ್ತುವರಿ ಮಾಡಿಕೊಂಡಿರುವ ಸ್ಥಳಗಳನ್ನು ಹಾಗೆ ಬಿಟ್ಟಿರುವುದು ಏಕೆ? ಬಿಜಿಎಸ್ ವೃತ್ತದ ಬಳಿ ಧಾರ್ಮಿಕ ಕಟ್ಟಡಗಳು ಪುಟ್ಬಾತ್ ಅತಿ ಕ್ರಮಿಸಿ ನಿರ್ಮಾಣವಾಗಿರುವುದು ಇವರಿಗೆ ಕಣ್ಣಿಗೆ ಕಾಣಿಸುತ್ತಿಲ್ಲ ಏಕೆ? ಎಂದು ಕೇಳಿದ್ದಾರೆ. ಸಾರ್ವಜನಿಕರ ಉಪಯೋಗಕ್ಕೆ ಬಾರದ, ದುಬಾರಿ ವೆಚ್ಚದಲ್ಲಿ ಬಿ.ಎಚ್. ರಸ್ತೆಯಲ್ಲಿ ನಿರ್ಮಾಣವಾಗಿರುವ ಎರಡು ಸ್ಕೈ ವಾಕರ್ ನಿರ್ಮಾಣವಾಗಿರುವುದು ಪಾದಾಚಾರಿ ಮಾರ್ಗದ ಮೇಲೆಯೇ ಅನ್ನುವುದನ್ನು ವಿಶೇಷವಾಗಿ ಗಮನ ಹರಿಸಬೇಕು. ಸುಪ್ರೀಂಕೋರ್ಟ್ ಆದೇಶದ ಅನ್ವಯ ಪಾದಚಾರಿ ಮಾರ್ಗ ತೆರವುಗೊಳಿಸುತ್ತಿದ್ದೇವೆ ಅಂತ ಹೇಳುವ ಮಹಾನಗರ ಪಾಲಿಕೆಯ ಅಧಿಕಾರಿಗಳು, ಸುಪ್ರೀಂ ಕೋರ್ಟ್ ಆದೇಶವಾದ ನಂತರ ಕೆ.ಆರ್. ಬಡಾವಣೆಯ ಫುಟ್ ಪಾತ್ ಮೇಲೆ ಗಿಡ ನೆಡುವ ಹೆಸರಿನಲ್ಲಿ, ಫುಟ್ಬಾತ್ ಒತ್ತುವರಿ ಮಾಡಿ ಕೊಂಡುಕಾಮಗಾರಿ ಮಾಡುತ್ತಿರುವುದು ಸುಪ್ರೀಂಕೋರ್ಟ್ ಆದೇಶದ ಸ್ಪಷ್ಟ ಉಲ್ಲಂಘನೆ ಅಲ್ಲವೇ? ಬಡ ವ್ಯಾಪಾರಿಗಳು ಪುಟ್ಬಾತ್ ನಲ್ಲಿ ವ್ಯಾಪಾರ ಮಾಡುವುದು ತಪ್ಪು ಅನ್ನುವುದಾದರೆ, ಮಹಾನಗರ ಪಾಲಿಕೆ ಅಧಿಕಾರಿಗಳು ಪುಟ್ಬಾತ್ ಒತ್ತುವರಿ ಮಾಡಿ ಕಾಮಗಾರಿ ಮಾಡುವುದು ಎಷ್ಟು ಸರಿ? 'ದೊರೆ ಮಾಡಿದ್ದಕ್ಕೆ ದಂಡ ಇಲ್ಲ' ಎನ್ನುವಂತಾಗಿದೆ ಎಂದಿದ್ದಾರೆ. ಹಾಗೆಯೇ ಶಿವಕುಮಾರ ಸ್ವಾಮೀಜಿ ವೃತ್ತದಿಂದ ಬಟವಾಡಿಯ ವರೆಗೂ ಫುಟ್‌ಪಾತ್ ಒತ್ತುವರಿ ಪೂರ್ಣತೆರವು ಗೊಂಡಿಲ್ಲ. ಇದು 45 ಮೀಟರ್ ರಸ್ತೆ. ಆದರೆ ಈ ರಸ್ತೆಯಲ್ಲಿ ಸಾಕಷ್ಟು ಕಡೆ ಸರ್ವಿಸ್ ರಸ್ತೆ ಹಾಗೂ ಫುಟ್‌ಪಾತ್ ಇರುವುದಿಲ್ಲ. ಕಾರಣ ಅಲ್ಲೆಲ್ಲಾ ಒತ್ತುವರಿಯಾಗಿದೆ. ಇದರಲ್ಲಿ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಈ ಗಂಭೀರ ಸಮಸ್ಯೆಯ ಬಗ್ಗೆ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡು, ಕೂಡಲೇ ತುಮಕೂರಿನ ನಾಗರಿಕರು ಓಡಾಡಲು ಸಮಸ್ಯೆ ಆಗಿರುವ ಪಾದಚಾರಿ ಮಾರ್ಗವನ್ನು ಸಂಪೂರ್ಣವಾಗಿ ತೆರವುಗೊಳಿಸದೆ ಹೋದರೆ, ಸಂಬಂಧ ಪಟ್ಟ ಅಧಿಕಾರಿಗಳ ವಿರುದ್ಧ ನಮ್ಮ ಸಂಸ್ಥೆಯು 'ನ್ಯಾಯಾಲಯ ನಿಂದನೆ' ಪ್ರಕರಣವನ್ನು ಸಾರ್ವಜನಿಕರ ಹಿತಾಸಕ್ತಿಯಿಂದ ದಾಖಲಿಸಲಾಗುವುದು ಎಂದು ಜಿ.ಎಸ್. ಬಸವರಾಜು ಹೇಳಿದ್ದಾರೆ.

ಹಾಲು ಉತ್ಪಾದಕರ ಹೆಣ್ಣು ಮಕ್ಕಳಿಗೆ ಉಚಿತ ಹಾಸ್ಟೆಲ್ ವ್ಯವಸ್ಥೆ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ.. ಹಾಲು ಉತ್ಪಾದಕರಿಗೆ ಹಾಲಿನ ದರ ಹೆಚ್ಚಿಸುವ ಬಗ್ಗೆ ಮುಂದಿನ ದಿನಗಳಲ್ಲಿ ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗುವುದೆಂದು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್ ತಿಳಿಸಿದ್ದಾರೆ ಕಸಬಾ ಹೋಬಳಿ ಸೋಮಲಾರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಕಟ್ಟಡ ನಿರ್ಮಿಸಲು ಹಣ ಬಿಡುಗಡೆ ಮಾಡಿ ಸುವುದಾಗಿ ತಿಳಿಸಿದ ಅವರು ತುಮಕೂರು ಹಾಲು ಒಕ್ಕೂಟದಿಂದ ಹಾಲು ಉತ್ಪಾದಕರ ಮಕ್ಕಳು ಉನ್ನತ ವಿದ್ಯಾಭ್ಯಾಸ ಮಾಡುವವರಿಗೆ ಹಣ ಸಹಾಯ ಮಾಡುವುದಾಗಿ ತಿಳಿಸಿದರು ಮತ್ತು ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿ ಕೊಡುವುದಾಗಿ ತಿಳಿಸಿದರು ಈ ಸಂದರ್ಭದಲ್ಲಿ ದಬ್ಬೇಘಟ್ಟ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಕಾಂತರಾಜು ಹಾಲು ಒಕ್ಕೂಟದ ಮಧುಗಿರಿ ಘಟಕದ ಮುಖ್ಯಸ್ಥರಾದ ನಾಗರಾಜು ವಿಸ್ತರಣಾ ಸಮವಾಲೋಚಕರಾದ ಧರ್ಮವೀರ ಆರ್ ಟಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಕವಿತಾ ಉಪಾಧ್ಯಕ್ಷರಾದ ಗೀತಾ ನಿರ್ದೇಶಕರಾದ ತಿಮ್ಮರಾಜಮ್ಮ ನಾಗವ್ವ ರಂಜಿತಾ ನಾಗಮಣಿ ಕೋಟಮ್ಮ ಲಕ್ಷ್ಮಮ್ಮ ರತ್ನಮ್ಮ ಮುಖ್ಯ ಕಾರ್ಯನಿರ್ವಕರಾದ ಶಿವಮ್ಮ ಮುಖಂಡರುಗಳಾದ ಎಸ್ ಬಿ ನಾಗರಾಜು ಅರುಣ ಆಕಾಶ್ ನಯನ ಮತ್ತಿತರರು ಹಾಜರಿದ್ದರು ಹಾಜರಿದ್ದರು



ಆಧ್ಯಾತ್ಮಿಕತೆಯಲ್ಲಿ ಸಾಧನೆ ಮಾಡಿದವನಿಗೆ ಮಾತ್ರ ದೇವರಲ್ಲಿ ನಂಬಿಕೆ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ- ಆಧ್ಯಾತ್ಮಿಕತೆಯಲ್ಲಿ ಸಾಧನೆ ಮಾಡಿದವನಿಗೆ ಮಾತ್ರ ದೇವರಲ್ಲಿ ನಂಬಿಕೆ ಬರುತ್ತದೆ, ನಮ್ಮಲ್ಲಿ ದೇವರ ಮೇಲೆ ಇರುವ ಪ್ರಶ್ನೆಗಳು ಮತ್ತಿತರ ವಿಷಯಗಳಲ್ಲಿ ಇದ್ದಿದ್ದರೆ ಪ್ರಪಂಚವು ಮತ್ತಷ್ಟು ಬದಲಾವಣೆಗೊಂಡು ಮುಂದುವರಿಯುತ್ತಿತ್ತು ಎಂದು ಶ್ರೀ ವೀರಭದ್ರಶೀವಾಚಾರ್ಯ ಸ್ವಾಮೀಜಿ ತಿಳಿಸಿದರು.



ಅವರು ಕೊರಟಗೆರೆ ಪಟ್ಟಣದ ಬಸವೇಶ್ವರ ದೇವಾಲಯದಲ್ಲಿ ಶ್ರಾವಣ ಸೋಮವಾರದ ವಿಶೇಷ ಪೂಜೆ ಸಲ್ಲಿಸಿ ದಿವ್ಯಸಾನಿಧ್ಯ ವಹಿಸಿ ಮಾತನಾಡಿ ಆಧ್ಯಾತ್ಮಿಕತೆಯ ಹಿನ್ನಲೆ ಯಾರು ಸಂಪೂರ್ಣವಾಗಿ ತಿಳಿದಿಲ್ಲ ಆದರೆ ನಿಯಮಗಳಲ್ಲಿ ಆಚರಣೆಗಳಲ್ಲಿ ಬಹಳ ವಿಷಯಗಳು ಸಾರಂಶಗಳು ಹರಿಡಿವೆ, ಇತ್ತೀಚೆಗೆ ಹಲವರು ದೈವದ ಬಗ್ಗೆ ಅದರ ವಾಸ್ತವತೆ ಮತ್ತು ನಿಯಮದ ಬಗ್ಗೆ ಸಾಕಷ್ಟು ಪ್ರಶ್ನಾತೀತಾವಾಗಿ ಮಾತನಾಡುತ್ತಾರೆ, ಸೃಷ್ಟಿಯನ್ನು ಮತ್ತು ಆಧ್ಯಾತ್ಮಿಕತೆಯನ್ನು ಅರಿಯಬೇಕಾದರೆ ತಿಳಿಯಬೇಕಾದರೆ ಅದರಲ್ಲಿ ಸಾಧನೆ ಮಾಡಬೇಕಾಗಿದೆ ಇಲ್ಲದಿದ್ದಲ್ಲಿ ಎಲ್ಲವೂ ಪ್ರಶ್ನೆಯಾಗಿಯೇ ಉಳಿಯುತ್ತದೆ, ಇತ್ತೀಚೆಗೆ ನಮ್ಮಗಳ ಜೀವನದಲ್ಲಿ ಹಲವಾರು ವಿದ್ಯಾಮಾನಗಳು ನಡೆಯುತ್ತಿವೆ ಅವುಗಳ ಬಗ್ಗೆ ನಾವುಗಳು ಯೋಚಿಸುವುದು ಇಲ್ಲ ಪ್ರಶ್ನಿಸುವುದು ಇಲ್ಲದೆ ಹಾಗೆ ಜೀವನವನ್ನು ನಡೆಸುತ್ತೇವೆ ಎಂದರು. ಆಧ್ಯಾತ್ಮಿಕತೆ ಜನರಿಗೆ ಉತ್ತಮವಾದ ಸಾಮಾಜಿಕ ಮತ್ತು ಕೌಟುಂಬಿಕ ಜೀವನ ಮೌಲ್ಯಾಧರಿತ ಬದುಕುವುದನ್ನು ತಿಳಿಸುತ್ತದೆ, ಮೊದಲು ನಿಮ್ಮ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ರೂಪಿಸಿದರೆ ಅವರ ಜೀವನ ಗುಣಾತ್ಮಕವಾಗಿರುತ್ತದೆ, ಮುಖ್ಯವಾಗಿ ಹಸಿದ ಹೊಟ್ಟೆಗೆ ಅನ್ನ ನೀಡುವ ಕಾರ್ಯ ಅತ್ಯಂತ ಪವಿತ್ರವಾದದ್ದು ಅದಕ್ಕಾಗಿಯೇ ಹೆಚ್ಚು ದಾಸೋಹಗಳನ್ನು ಕೆಲಸಗಳನ್ನು ಮಾಡಬೇಕಿದೆ ಎಂದ ಅವರು ಈಗಿನ ಆಧುನಿಕ ವಿಜ್ಞಾನ ಜ್ಞಾನದಿಂದ ರೂಪಗೊಳ್ಳುತ್ತಿದೆ ಅದಕ್ಕೆ ಆಧ್ಯಾತ್ಮಿಕತೆಯ ಮುಖ್ಯವಾಗಿದೆ, ಬಸವೇಶ್ವರ ದೇವಾಲಯದಲ್ಲಿ 20 ವರ್ಷಗಳಿಂದ ಶ್ರಾವಣ ಮಾಸದ ಆಧ್ಯಾತ್ಮಿಕ ಪ್ರವಚನ ನಡೆಯುತ್ತಿದ್ದು ಇದರಿಂದ ಜನರು ಸ್ವಲ್ಪ ಬದಲಾವಣೆಯಾಗಿದ್ದರೂ ಈ ಕಾರ್ಯಕ್ರಮ ಸಾರ್ಥಕವಾದಂತೆ ಎಂದರು.

ಸಣ್ ಸುದ್ದಿ

ಪಿಹೆಚ್.ಡಿ ಫೆಲೋಶಿಪ್‌ಗಾಗಿ ಆನ್‌ಲೈನ್ ಅರ್ಜಿ ಆಹ್ವಾನ

ತುಮಕೂರು: ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ 2026-27ನೇ ಸಾಲಿನಲ್ಲಿ ಪೂರ್ಣಕಾಲಿಕವಾಗಿ ಪಿಹೆಚ್.ಡಿ ಸಂಶೋಧನೆ ಕೈಗೊಳ್ಳುತ್ತಿರುವ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಜೆ.ಆರ್.ಎಫ್ ಮಾದರಿಯಲ್ಲಿ ಫೆಲೋಶಿಪ್ ಪಾವತಿಸಲು ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಅಭ್ಯರ್ಥಿಗಳು https://sevasindhu.karnataka.gov.in/Sevasindhu/Department Services ಮೂಲಕ ಅಕ್ಟೋಬರ್ 31ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಸಂಶೋಧನಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಸರ್ಕಾರಿ/ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ವಿದ್ಯಾರ್ಥಿಯ/ಪಾಲಕರ/ಪೋಷಕರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ 8 ಲಕ್ಷ ರೂ. ಮೀರಿರಬಾರದು. ವಿದ್ಯಾರ್ಥಿಯ ಗರಿಷ್ಠ ವಯೋಮಿತಿ 35 ವರ್ಷಗಳಾಗಿದ್ದು, ಸರ್ಕಾರದಿಂದ ಶಾಸನಬದ್ಧ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯಗಳಲ್ಲಿ ಪಿಹೆಚ್.ಡಿ ಕೋರ್ಸಿಗೆ ಪೂರ್ಣಕಾಲಿಕವಾಗಿ ಪ್ರವೇಶ ಪಡೆದಿರಬೇಕು.

ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಆಗಿರುವ ಬಗ್ಗೆ ಹಾಗೂ NPCI Mapping Active ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಫೆಲೋಶಿಪ್ ಪ್ರಕ್ರಿಯೆಯು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸರ್ಕಾರದ ಆದೇಶ ಹಾಗೂ ಮಾರ್ಗಸೂಚಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲೆಯ ಒಖಅ ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಕಚೇರಿ ಅಥವಾ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ : ವ್ಯಕ್ತಿ ಕಾಣೆ

ತುಮಕೂರು : ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿ ಜಕ್ಕೇನಹಳ್ಳಿ ಗ್ರಾಮದ ಸುಮಾರು 48 ವರ್ಷದ ಸುಭಾಷ್ ಜೆ.ಹೆಚ್. ಎಂಬ ವ್ಯಕ್ತಿಯು ಜುಲೈ 15ರಂದು ಕಾಣೆಯಾಗಿದ್ದು, ಠಾಣೆಯಲ್ಲಿ ದೂರು ದಾಖಲಾಗಿದೆ.

ಕಾಣೆಯಾದ ವ್ಯಕ್ತಿಯು ಶ್ರೀದೇವಿ ಆಸ್ಪತ್ರೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದನು. ಈತನು ಸುಮಾರು 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ ಹೊಂದಿದ್ದು, ಎದೆಯ ಮಧ್ಯಭಾಗದಲ್ಲಿ ಸುಮಾರು 2 ಸೆಂ.ಮೀ. ಗಾತ್ರದ ಚರ್ಮದ ಗಂಟು ಇದೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ಶರ್ಟ್ ಹಾಗೂ ಕಪ್ಪು ಪ್ಯಾಂಟ್ ಧರಿಸಿದ್ದನು.

ಈತನ ಬಗ್ಗೆ ಸುಳಿವು ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಯಾವುದೇ ಫ್ಲೆಕ್ಸ್, ಬ್ಯಾನರ್ ಬಳಕೆ ಮಾಡುವಂತಿಲ್ಲ



ತಾವುಗಳು ಒಂದು ಸಮುದಾಯವನ್ನು ಗುರಿಯಾಗಿಸಿದ ಯಾವುದೇ ಫ್ಲೆಕ್ಸ್, ಬ್ಯಾನರ್ ಬಳಕೆ ಮಾಡುವಂತಿಲ್ಲ ಎಂದರು.

ಗಣಪತಿ ಪ್ರತಿಷ್ಠಾಪನೆ, ಉತ್ಸವ ಮತ್ತು ವಿಜರ್ಸನೆ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ಹೆಚ್ಚಿನ ಗಮನವನ್ನು ಪೊಲೀಸ್ ಇಲಾಖೆ ಹರಿಸಲಿದೆ. ಆಯೋಜಕರು ನಿಗಾವಹಿಸಬೇಕು.ಗಣಪತಿ ಕೂರಿಸುವ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರ ಕಡ್ಡಾಯ,ಇದರಿಂದ ಮುಂದಾಗಬಹುದಾದ ಅನಾಹುತ ತಪ್ಪಿಸಲು, ಹಾಗೂ ಆಗಿರಬಹುದಾದ ಅನಾಹುತಕ್ಕೆ ಕಾರಣ ಏನು ಎಂದು ತಿಳಿದುಕೊಳ್ಳಲು ಸಹಕಾರಿಯಾಗಲಿದೆ. ಇದರಿಂದ ಪರಿಸ್ಥಿತಿಯ ಲಾಭ ಪಡೆದು ಸಮಾಜ ವಿದ್ರೋಹಿ ಶಕ್ತಿಗಳು ಲಾಭ ಪಡೆಯುವುದನ್ನು ತಡೆಗಟ್ಟಬಹುದು. ನಗರದಲ್ಲಿ ಸುಮಾರು 500ಕ್ಕೂ ಹೆಚ್ಚು ಕ್ಯಾಮರಗಳ ಮೂಲಕ ಪ್ರತಿಯೊಂದ ಏರಿಯಾದ ಚಲನವಲನಗಳನ್ನು ಪೊಲೀಸ್ ಇಲಾಖೆ ಗಮನಿಸುತ್ತಿದೆ.ಕುಡಿದು ಬಂದ ಗಲಾಟೆ ಮಾಡುವುದು, ಸಾರ್ವಜನಿಕರಿಗೆ ತೊಂದರೆ ನೀಡಿದರೆ ಕಾನೂನಿನ ಕುಣಿಕೆ ಬಿಗಿಯಾಗಲಿದೆ.ಗಣಪತಿ ಹಬ್ಬವನ್ನು ಶಾಂತವಾಗಿ, ಸಂತೋಷದಿಂದ ಎಲ್ಲರೂ ಹಬ್ಬದ ರೀತಿ ಆಚರಿಸಲು ಪೊಲೀಸ್ ಇಲಾಖೆಯ ಸಹಕಾರವಿದೆ ಎಂದು ಎಸ್.ಪಿ ಅಶೋಕ್ ಕೆ.ವಿ ತಿಳಿಸಿದರು.

ಎಎಪಿ ಗೋಪಾಲ್ ಪ್ರಾಸ್ತಾವಿಕವಾಗಿ ಮಾತನಾಡಿ,ಗಣಪತಿ ವಿಸರ್ಜನೆ, ಉತ್ಸವ ಮತ್ತು ವಿಸರ್ಜನೆ ಎಲ್ಲವೂ ಶಾಂತ ರೀತಿಯಲ್ಲಿ ನಡೆಯಬೇಕೆಂಬುದು ಪೊಲೀಸ್ ಇಲಾಖೆಯ ಆಶಯವಾಗಿದೆ.ಕಳೆದ ಮೂರು ವರ್ಷಗಳಿಂದ ಯಾವುದೇ ರೀತಿಯ ಅಹಿತಕರ ಘಟನೆಯಿಲ್ಲದೆ ನಡೆದುಕೊಂಡು ಬರುತ್ತಿದೆ. ಈ ವರ್ಷವೂ ಅದೇ ರೀತಿ ನಡೆಸಲು ಆಯೋಜಕರುಗಳು ಸಹಕರಿಸಬೇಕೆಂಬುದು ನಮ್ಮ ಮನವಿ.ಸೋಷಿಯಲ್ ಮೀಡಿಯಾದಲ್ಲಿ ಬರುವ ಕಂಟೆಂಟ್‌ಗಳನ್ನು ವೈರಲ್ ಮಾಡುವ ಮೊದಲು ಅದರ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ತಪ್ಪಿಗೆ ಸಿಕ್ಕಿ ಹಾಕಿಕೊಳ್ಳುವ ಅಪಾಯವಿದೆ.ಪೊಲೀಸ್ ಇಲಾಖೆ ದಿನದ 24 ಗಂಟೆಗಳ ಕಾಲವೂ ನಿಮ್ಮೊಂದಿಗೆ ಕೆಲಸ ಮಾಡಲು ಸಿದ್ಧವಿದೆ.ಸೂಕ್ಷ್ಮ ಸ್ಥಳಗಳಲ್ಲಿ ಮೆರವಣಿಗೆ ಸಾಗುವಾಗ ತಾಳ್ಮೆ ಇರಲಿ. ಪ್ರಚೋದನೆಗೆ ಒಳಗಾಗುವುದು ಬೇಡ ಎಂದರು. ಸಭೆಯಲ್ಲಿ ತುಮಕೂರು ನಗರ ಡಿವೈಎಸ್ಪಿ ಚಂದ್ರಶೇಖರ್, ಗ್ರಾಮಾಂತರ ಡಿವೈಎಸ್ಪಿ ಪುಟ್ಟೇಗೌಡ ಹಾಗೂ ಪೊಲೀಸ್ ಸಿಬ್ಬಂದಿಗಳು,ವಿವಿಧ ಗಣಪತಿ ಪ್ರತಿಷ್ಠಾಪನಾ ಸಮಿತಿಗಳ ಆಯೋಜಕರುಗಳ ಭಾಗವಹಿಸಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.